## ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1071
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ, (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ: : 22.9.2022

4 ಉತ್ತರಿಸುವವರು ಮಾನ್ಯ ಮುಖ್ಯ ಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 2010 ರಿಂದ ನೇಮಕಾತಿ ಹೊಂದಿರುವ ಬಹುತೇಕ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಳೆದ 12 ವರ್ಷಗಳಿಂದ ಪದೋನ್ನತಿ ಇಲ್ಲದೇ ಒಂದೇ ಹುದ್ದೆಯಲ್ಲಿ ನಿರಂತರ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಇಲಾಖೆಯ ಕಾರ್ಯಯೋಜನೆಯೇನು; | ಗಣನೀಯ ಸಂಖ್ಯೆಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸದರಿ ಹುದ್ದೆಯಲ್ಲಿ ನಿರಂತರ 12 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನದಲ್ಲಿದೆ.<br><br>ರಾಜ್ಯದಲ್ಲಿ ಸುಮಾರು 6000ಕ್ಕೂ ಹೆಚ್ಚು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಮಂಜೂರಾಗಿರುತ್ತವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕ ಹುದ್ದೆಗೆ ಶೇ 100 ರಷ್ಟು ಪ್ರಮಾಣದಲ್ಲಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಹಿಂದೆ ಮುಂಬಡ್ತಿಗೆ ಕೇವಲ 226 ಸಹಾಯಕ ನಿರ್ದೇಶಕ ಹುದ್ದೆಗಳು ಲಭ್ಯವಿದ್ದವು. ನಂತರ ಸರ್ಕಾರವು ಆದೇಶ ಸಂಖ್ಯೆ: ಗ್ರಾಅಪ 05 ಕೆ.ಎಸ್.ಎಸ್ 2016, ದಿನಾಂಕ:31.5.2021ರಲ್ಲಿ ಪ್ರತಿ ತಾಲ್ಲೂಕು ಪಂಚಾಯತಿಗೆ ಒಂದು ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಯಂತೆ ಒಟ್ಟು 226 |

| | | |
|---|---|---|
| | | ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಗಳನ್ನು ಸೃಜಿಸುವ ಮೂಲಕ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮುಂಬಡ್ತಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ.<br><br>ಪ್ರಸ್ತುತ ಮಂಜೂರಾಗಿರುವ 452 ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ/ ಪಂಚಾಯತ್ ರಾಜ್) ಹುದ್ದೆಗಳಲ್ಲಿ ಸರಿ ಸುಮಾರು 318 ಹುದ್ದೆಗಳು ಖಾಲಿ ಇರುತ್ತವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದ ದಿನಾಂಕ:21.2.2014ರ ಜೇಷ್ಠತಾ ಪಟ್ಟಿಯ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:201903-906/2019 ಹಾಗೂ ತತ್ಸಂಬಂಧಿತ ಪ್ರಕರಣಗಳು ಬಾಕಿ ಇದ್ದು, ಅವುಗಳಲ್ಲಿನ ದಿನಾಂಕ:19.6.2019 ಮಧ್ಯಂತರ ಆದೇಶ, ಸರ್ಕಾರವು ಸಲ್ಲಿಸಿದ್ದ ಮಧ್ಯಂತರ ಅರ್ಜಿಗಳ ಕುರಿತು ದಿನಾಂಕ:09.7.2020 ರಂದು ನೀಡಿರುವ ಆದೇಶಗಳ ಹಿನ್ನೆಲೆಯಲ್ಲಿ ಮಿಕ್ಕುಳಿದ ಮಾತೃ ವೃಂದಕ್ಕೆ ಸೇರಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಖಾಲಿ ಇರುವ ಹುದ್ದೆಗಳಿಗೆ ಮುಂಬಡ್ತಿ ನೀಡಲು ಅಥವಾ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ -32 ರ ಅನುಸಾರ ಸ್ವತಂತ್ರ ಪ್ರಭಾರದಲ್ಲಿರಿಸಲು ಸಾಧ್ಯವಾಗುತ್ತಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮವಹಿಸಲಾಗುವುದು. |
| (ಆ) | ರಾಜ್ಯದ ಪ್ರತಿ ಜಿಲ್ಲಾ ಪಂಚಾಯತ್‌ಗಳಲ್ಲಿ | ಜಿಲ್ಲಾ ಪಂಚಾಯತ್‌ಗಳಿಗೆ ಮಂಜೂರಾಗಿರುವ ಸಹಾಯಕ ಯೋಜನಾಧಿಕಾರಿ-1 (ಎಪಿಓ-1) ಮತ್ತು |

| | | |
|---|---|---|
| | ಸೃಜನೆಯಾಗಿರುವ ಎಪಿಓ-1 ಮತ್ತು ಎಪಿಓ-2 ಹುದ್ದೆಗಳ ನೇಮಕಾತಿ ನಿಯಮಗಳೇನು; ಈ ಸಂಬಂಧ ಇಲಾಖೆಯಲ್ಲಿ ರಚನೆಯಾದ ಸಮಿತಿಯು ಕೈಗೊಂಡ ನಿರ್ಣಯವೇನು; (ನಿರ್ಣಯದ ಹಾಗೂ ನಿಯಮಾವಳಿಯ ಸಂಪೂರ್ಣ ದಾಖಲಾತಿ ನೀಡುವುದು). | ಸಹಾಯಕ ಯೋಜನಾಧಿಕಾರಿ-2 (ಎಪಿಓ-2) ಹುದ್ದೆಗಳು ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತವಡಿ ಆದೇಶ ಸಂಖ್ಯೆ:ಆರ್‌ಡಿಪಿ 285 ಎಸೇಬಿ 99, ದಿನಾಂಕ:18.3.2000ರಲ್ಲಿ ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶವೆಂದು ರಚಿಸಲಾದ ಹುದ್ದೆಗಳಾಗಿರುತ್ತವೆ. ಸದರಿ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ವೃಂದ ಬಲಕ್ಕೆ ಸೇರ್ಪಡೆ ಮಾಡಿರುವುದಿಲ್ಲ. ಸದರಿ ಹುದ್ದೆಗಳ ನೇಮಕಾತಿ ಆದೇಶದಲ್ಲಿ ನೇಮಕಾತಿ ವಿಧಾನವನ್ನು ಈ ಕೆಳಕಂಡಂತೆ ತಿಳಿಸಲಾಗಿತ್ತು (ಆದೇಶದ ಪ್ರತಿ ಲಗತ್ತಿಸಿದೆ).<br><br>**"ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶದ ಎಲ್ಲಾ ಹುದ್ದೆಗಳನ್ನು ಈಗಾಗಲೇ ಜಿಲ್ಲಾ ಪಂಚಾಯತ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಮರು ಹೊಂದಾಣಿಕೆ ಮಾಡುವ ಮೂಲಕ ಮತ್ತು ಇತರೆ ಇಲಾಖೆಗಳಿಂದ ಮರು ವಿನ್ಯಾಸಗೊಳಿಸುವ ಮೂಲಕ ತುಂಬತಕ್ಕದ್ದು"**<br><br>ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ) ರವರು ಸಲ್ಲಿಸಿದ್ದ ಬೇಡಿಕೆಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ತನ್ನ ಶಿಫಾರಸ್ಸಿನ ಕಂಡಿಕೆ- 5& 6 ರ ಭಾಗದಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ. (ಸಮಿತಿಯ ಶಿಫಾರಸ್ಸು ಪ್ರತಿ ಲಗತ್ತಿಸಿದೆ).<br>**" ……… ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ನೇಮಕಾತಿ ಹೊಂದಿರುವ ಲಿಪಿಕ** |

| | | |
|---|---|---|
| | | ವೃಂದದ ನೌಕರರಿಗೆ ಕಛೇರಿ ಅಧೀಕ್ಷಕ ಹುದ್ದೆವರಗೆ ಮಾತ್ರ ಮುಂಬಡ್ತಿಗೆ ಅವಕಾಶವಿರುತ್ತದೆ. ಆದರ ನಂತರ ಮುಂಬಡ್ತಿಗೆ ಅವಕಾಶವಿರುವುದಿಲ್ಲ. ಆದ್ದರಿಂದ, ಸದರಿಯವರುಗಳಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸುವ ದೃಷ್ಠಿಯಿಂದ ಕಛೇರಿ ಅಧೀಕ್ಷಕರ ವೃಂದವನ್ನು ಪತ್ರಾಂಕಿತ ಮ್ಯಾನೇಜರ್ ಹುದ್ದೆಗೆ ಉನ್ನತೀಕರಿಸಲು ಹಾಗೂ ಸಹಾಯಕ ಯೋಜನಾಧಿಕಾರಿ ವೃಂದದ 30 ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಪರಿಗಣಿಸಿದ ನಂತರ ಸದರಿ ಹುದ್ದೆಗಳಿಗೆ ಲಿಪಿಕ ವೃಂದದ ನೌಕರರುಗಳಿಗೆ 15 ಹುದ್ದೆಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ 15 ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸುವುದು ಸೂಕ್ತವಾಗಿದೆ. ಈ ದಿಸೆಯಲ್ಲಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಶಿಫಾರಸ್ಸು ಮಾಡಲು ಸಮಿತಿಯು ಶಿಪಾರಸ್ಸು ಮಾಡಿರುತ್ತದೆ".<br><br>" .... ಹಾಗಾಗಿ ಹಾಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಿಗೆ ಮಂಜೂರಾಗಿರುವ ಮ್ಯಾನೇಜರ್/ಕಛೇರಿ ಅಧೀಕ್ಷಕ ವೃಂದದ ಹುದ್ದೆಗಳ ಪೈಕಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ ಒಟ್ಟು 30 ಹುದ್ದೆಗಳನ್ನು ಗ್ರೂಪ್- ಬಿ ವೃಂದದ ಪತ್ರಾಂಕಿತ ಮ್ಯಾನೇಜರ್ ಹುದ್ದೆ ಎಂದು ಉನ್ನತೀಕರಿಸಿ ಮುಂಬಡ್ತಿಗೆ ಅವಕಾಶ ಕಲ್ಪಿಸುವುದು ಸೂಕ್ತವಾಗಿದೆ. ಅದೇ ರೀತಿ ಹಾಲಿ ಜಿಲ್ಲಾ ಪಂಚಾಯತಿಗಳಿಗೆ ಮಂಜೂರಾಗಿರುವ ಗ್ರೂಪ್-ಬಿ ವೃಂದದ ಸಹಾಯಕ ಯೋಜನಾಧಿಕಾರಿ 30 |

| | | |
|---|---|---|
| | | **ಹುದ್ದೆಗಳು ಹಾಗೂ ಡಿ.ಆರ್.ಡಿ.ಎ ಯೋಜನೆಯಲ್ಲಿ ಮಂಜೂರಾಗಿರುವ ಗ್ರೂಪ್-ಎ ವೃಂದದ ಸಹಾಯಕ ಯೋಜನಾಧಿಕಾರಿ ಹುದ್ದೆಗಳನ್ನು ಜಿಲ್ಲಾ ಪಂಚಾಯತ್ /ತಾಲ್ಲೂಕು ಪಂಚಾಯತ್ ಸೇವೆಯ ಲಿಪಿಕ ವೃಂದದ ನೌಕರರುಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದ ನೌಕರರುಗಳಿಗೆ ಮುಂಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸುವ ಕ್ರಮವಹಿಸಬಹುದಾಗಿದೆ."**<br><br>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 05 ಕೆ.ಎಸ್.ಎಸ್ 2016, ದಿನಾಂಕ:31.5.2021 ರನ್ವಯ ಹೊಸದಾಗಿ 226 ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಗಳು ಸೃಜನೆಯಾದ ಕಾರಣ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮುಂಬಡ್ತಿಗೆ ಹೆಚ್ಚಿನ ಅವಕಾಶ ಲಭ್ಯವಾಗಿದ್ದರಿಂದ, ಸಮಿತಿಯ ಮೇಲಿನ ಶಿಫಾರಸ್ಸನ್ನು ಯಥಾವತ್ತಾಗಿ ಜಾರಿ ಮಾಡಲು ಕ್ರಮವಹಿಸಿರುವುದಿಲ್ಲ. |
| (೩) | ಎಪಿಒ-1 ಮತ್ತು ಎಪಿಒ-2 ಹುದ್ದೆಗಳನ್ನು ಕೇವಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವೃಂದದಿಂದ ಪದೋನ್ನತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಬಹುದಾಗಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? (ದಾಖಲೆಯೊಂದಿಗೆ ವಿವರ ನೀಡುವುದು). | ಈ ವರ್ಗದ ಎರಡು ವೃಂದದ ಹುದ್ದೆಗಳು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳ ವೃಂದ ಬಲದಲ್ಲಾಗಲಿ, ಇತ್ತೀಚಿಗೆ ರಚಿಸಲಾದ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು-2020ರ ವೃಂದ ಬಲದಲ್ಲಾಗಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ವೃಂದದ ಹುದ್ದೆಗಳು ಮೂಲತಃ ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶ (ಡಿ.ಆರ್.ಡಿ.ಎ) |

| | | |
|---|---|---|
| | | ಯೋಜನೆಯಡಿ ಸೃಜಿಸಲಾದ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ಇತರೆ ಡಿ.ಆರ್.ಡಿ.ಎ ಯೋಜನೆಯಡಿ ಮಂಜೂರಾದ ಹುದ್ದೆಗಳೊಂದಿಗೆ ಆದೇಶ ಸಂಖ್ಯೆ: ಕೆ.ಪಿ.ಆರ್.ಸಿ-ಜಿಪಿಎ/236/2021-ಕೆಪಿಆರ್‌ಸಿ –ಡಿಡಿ3-ಕೆಪಿಆರ್‌ಸಿ , ದಿನಾಂಕ:09.8.2021 ರಲ್ಲಿ ಓ.ಆರ್.ಡಿ.ಪಿ ಲೆಕ್ಕ ಶೀರ್ಷಿಕೆಗೆ ವರ್ಗಾಯಿಸಿ, ಆದೇಶಿಸಲಾಗಿದೆ.<br><br>ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದ ನೌಕರರಿಗೆ ಹೆಚ್ಚುವರಿಯಾಗಿ 226 ಸಹಾಯಕ ನಿರ್ದೇಶಕ ಹುದ್ದೆಗಳ ಸೃಜನೆಯಿಂದ ಹೆಚ್ಚಿನ ಮುಂಬಡ್ತಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಒಟ್ಟು 271 ಅಧೀಕ್ಷಕ ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಯಾವುದೇ ಮುಂಬಡ್ತಿ ಅವಕಾಶ ಇಲ್ಲದಿರುವುದನ್ನು ಹಾಗೂ ಕೆಲವು ಅಧೀಕ್ಷಕರುಗಳು ಬಹಳಷ್ಟು ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಪರಿಗಣಿಸಿ, ಎಪಿಎ-2 ಹುದ್ದೆಗಳನ್ನು (31 ಹುದ್ದೆಗಳು) ಪತ್ರಾಂಕಿತ ವ್ಯವಸ್ಥಾಪಕ/ಸಹಾಯಕ ನಿರ್ದೇಶಕ (ಆಡಳಿತ) ಎಂದು ಮಾರ್ಪಡಿಸಿಕೊಂಡು ಅವುಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳ-2020 ರ ವೃಂದ ಬಲದಲ್ಲಿ ಸೇರಿಸುವ ಷರತ್ತಿಗೊಳಪಟ್ಟು, ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕ |

| | | |
|---|---|---|
| | | ವೃಂದದ ನೌಕರರುಗಳಿಗೆ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸುವ ದಿಸೆಯಲ್ಲಿ ಕ್ರಮವಹಿಸಲಾಗುತ್ತಿದೆ.<br><br>ಉಳಿದಂತೆ ಏಪಿಓ-1 ಹುದ್ದೆಯು ವೇತನ ಶ್ರೇಣಿ ರೂ. 52,650 -97,100/- ರ ಗ್ರೂಪ್-ಏ ಕಿರಿಯ ಶ್ರೇಣಿ ವೃಂದದ ಹುದ್ದೆಯಾಗಿರುತ್ತದೆ. ಸದರಿ ಹುದ್ದೆಯ ಎದುರಿಗೆ ಗ್ರೂಪ್-ಸಿ ವೃಂದವಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವರಿಗೆ ನೇರವಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲು ಬರುವುದಿಲ್ಲ. |

ಗ್ರಾಅಪ 213 KSS 2022(ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ ಪಂಚಾಯಿತ್ತಿಗಳಲ್ಲಿ " ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ " ದಡಿಯಲ್ಲಿ "ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಕೋಶವನ್ನು" ರಚಿಸುವ ಕುರಿತು.

*****

**ಪ್ರಸ್ತಾವನೆ:**

1999-2000 ಸಾಲಿನಿಂದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಪುನರ್ರಚಿಸುವ ನಿಟ್ಟನಲ್ಲಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಮಂತ್ರಾಲಯದ ಜಿಲ್ಲಾ ಕಾರ್ಯಕ್ರಮಗಳ ವೆಚ್ಚವನ್ನು ಸಮಾನವಾಗಿ ಕೇಂದ್ರ ಮತ್ತು ರಾಜ್ಯಗಳ ನಡುವೆ 75:25ರ ಅನುಪಾತದಲ್ಲಿ ಭರಿಸಲು ಕಾರ್ಯಕ್ರಮ ರೂಪಿಸಿದೆ. ಅಲ್ಲದೆ ಆಡಳಿತಾತ್ಮಕ ವೆಚ್ಚವನ್ನು ಪ್ರತಿ ಕಾರ್ಯಕ್ರಮದ ವೆಚ್ಚದ ಶೇಕಡವಾರು ಪ್ರಮಾಣವನ್ನು ಬದಲಾಯಿಸಿ "ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಆಡಳಿತ " ಎಂಬ ಹೊಸ ಕಾರ್ಯಕ್ರಮವನ್ನು ಕೇಂದ್ರ ಪುರಸ್ಕೃತ ಯೋಜನೆಗಳ ಆಡಳಿತಾತ್ಮಕ ವೆಚ್ಚವನ್ನು ಭರಿಸುವ ಸಲುವಾಗಿ ರೂಪಿಸಿದೆ. ದಿನಾಂಕ: 1-4-1999 ರಿಂದ ಜಾರಿಗೆ ಬಂದಿರುವ ಹೊಸ ಕೇಂದ್ರ ಪುರಸ್ಕೃತ ಕಾರ್ಯಕ್ರಮದ ಪ್ರಮುಖ ರೂಪುರೇಷೆಗಳು ಈ ಕೆಳಕಂಡಂತಿವೆ.

(ಎ) ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಸಮನ್ವಯ ಮತ್ತು ನಿರ್ವಹಣೆಗಾಗಿ ಪ್ರತಿ ಜಿಲ್ಲೆಯೂ ಒಂದು ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರವನ್ನು ಹೊಂದಿರಬೇಕು. ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತವನ್ನು ಜಿಲ್ಲಾ ಪಂಚಾಯತ್‌ಗಳಲ್ಲಿ ವಿಲೀನಗೊಳಿಸಿರುವಲ್ಲಿ ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಒಂದು ಪ್ರತ್ಯೇಕ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಕೋಶವನ್ನು ರಚಿಸಬೇಕು.

(ಬಿ) ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ: ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಕೋಶದ ಸಿಬ್ಬಂದಿಯು ಭಾರತ ಸರ್ಕಾರ ರೂಪಿಸಿರುವ ಮಾದರಿಯಲ್ಲಿರಬೇಕು. ಈ ಮಾದರಿಯಂತೆ ಪ್ರತಿ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರವು ಒಂದು ಯೋಜನಾ ನಿರ್ವಹಣಾ ವಿಭಾಗ, ಒಂದು ಸ್ವ ಉದ್ಯೋಗ ವಿಭಾಗ, ಒಂದು ಮಹಿಳಾ ಕಾರ್ಯಕ್ರಮಗಳ ವಿಭಾಗ, ಒಂದು ಕೂಲಿ ಉದ್ಯೋಗ ವಿಭಾಗ, ಒಂದು ಜಲಾನಯನ ವಿಭಾಗ, ಒಂದು ತಾಂತ್ರಿಕ ವಿಭಾಗ, ಒಂದು ಲೆಕ್ಕ ಪತ್ರ ವಿಭಾಗ, ಒಂದು ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವಿಭಾಗ ಮತ್ತು ಒಂದು ಸಾಮಾನ್ಯ ಆಡಳಿತ ವಿಭಾಗವನ್ನು ಹೊಂದಿರತಕ್ಕದ್ದು

(ಸಿ) ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ : ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಕೋಶದ ವೆಚ್ಚವು ಪ್ರತಿ ವರ್ಷಕ್ಕೆ ಪ್ರತಿ ಜಿಲ್ಲೆಗೆ ಈ ಕೆಳಕಂಡಂತೆ ರೂ.46 ಲಕ್ಷದಿಂದ 67 ಲಕ್ಷ ರೂಪಾಯಿಗಳ ಮಿತಿಗೆ ಒಳಪಟ್ಟಿರುತ್ತದೆ.

| ಜಿಲ್ಲೆಗಳ ವರ್ಗೀಕರಣ | ತಾಲ್ಲೂಕುಗಳ ಸಂಖ್ಯೆ | ಲಭ್ಯವಿರುವ ಆಡಳಿತಾತ್ಮಕ ವೆಚ್ಚ |
|---|---|---|
| ಎ | ಆರು ತಾಲ್ಲೂಕುಗಳಿಗಿಂತ ಕಡಿಮೆ | ರೂ: 46 ಲಕ್ಷ |
| ಬಿ | 6-10 ತಾಲ್ಲೂಕುಗಳು | ರೂ: 57 ಲಕ್ಷ |
| ಸಿ | 11-15 ತಾಲ್ಲೂಕುಗಳು | ರೂ: 65 ಲಕ್ಷ |
| ಡಿ | 15 ತಾಲ್ಲೂಕುಗಳಿಗಿಂತ ಹೆಚ್ಚು | ರೂ: 67 ಲಕ್ಷ |

(ಡಿ) ಇಡೀ ರಾಜ್ಯಕ್ಕೆ ಲಭ್ಯವಿರುವ ಒಟ್ಟು ಅನುದಾನದ ಶೇ: 10 ರಷ್ಟು ಹಣವನ್ನು ರಾಜ್ಯ ಮಟ್ಟದ ಸಿಬ್ಬಂದಿಗಾಗಿ ವೆಚ್ಚ ಮಾಡಬಹುದು.

ಬೇರೆ ಲೆಕ್ಕ ಶೀರ್ಷಿಕೆಗಳಿಂದ ಸಿಬ್ಬಂದಿ ವೆಚ್ಚವನ್ನು ಭರಿಸುತ್ತಿರುವ ಕೆಲವು ಅಧಿಕಾರಿ ಹಾಗೂ ಸಿಬ್ಬಂದಿಗಳ ಸೇವೆಯನ್ನು ಹಾಗೂ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರಕ್ಕಾಗಿ ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಹಾಗೂ ಕೇಂದ್ರ ಸರ್ಕಾರ ಸೂಚಿಸಿರುವ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರದ ರಚನೆಯ ಮಾರ್ಗಸೂಚಿಗಳು ಹಾಗೂ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ಸುಧಾರಿಸಲು ಹಾಗೂ ಬಲಪಡಿಸುವ ದೃಷ್ಟಿಯಿಂದ ರಾಜ್ಯದ ಪ್ರತಿ ಜಿಲ್ಲಾ ಪಂಚಾಯತ್‌ಗಳಲ್ಲಿ ಒಂದು ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಕೋಶವನ್ನು ಸೃಷ್ಟಿಸಲು ಉದ್ದೇಶಿಸಲಾಗಿದೆ. ಈ ನೂತನ ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಕೋಶದ ಅಂಗವಾಗಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಅತ್ಯಗತ್ಯವಾಗಿರುವ 81 ಹೊಸ ಹುದ್ದೆಗಳನ್ನು ಸೃಜಿಸಲು ಉದ್ದೇಶಿಸಲಾಗಿದೆ.

ಯೋಜನಾ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳ ಕರ್ತವ್ಯವು ಗ್ರಾಮೀಣ ಪ್ರದೇಶಗಳಲ್ಲಿ ಕೂಲಿ ಉದ್ಯೋಗ, ಮಹಿಳೆಯರ ಅಭಿವೃದ್ಧಿ ಸ್ವ ಉದ್ಯೋಗ ಹಾಗೂ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಮೇಲ್ವಿಚಾರಣೆಯನ್ನು ಒಳಗೊಂಡಿದ್ದು ,ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಹುದ್ದೆಗೆ ಅಗತ್ಯವಾದ ಬುದ್ಧಿ ಸಾಮರ್ಥ್ಯ ,ಅನುಭವ ಇತ್ಯಾದಿಗಳನ್ನು ಹೊಂದಿದವರಾಗಿರಬೇಕಾಗಿದ್ದರಿಂದ ಸೂಕ್ತವಾದ ಅಧಿಕಾರಿಗಳನ್ನು ಪಡೆಯಲು ಉದ್ದೇಶಿಸಲಾಗಿದೆ.

ಮೇಲೆ ತಿಳಿಸಿರುವ ಹೊಸ ಹುದ್ದೆಗಳ ಸೃಜನೆಯಲ್ಲದೆ ಪ್ರಸ್ತುತ ಬೇರೆ ಕಾರ್ಯಕ್ರಮಗಳಡಿಯಲ್ಲಿ ಭರಿಸುತ್ತಿರುವ 222 ಹುದ್ದೆಗಳ ಆಡಳಿತಾತ್ಮಕ ವೆಚ್ಚವನ್ನು ಸಹ , ಈ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರದಡಿಯಲ್ಲಿ ಭರಿಸಲು ಪ್ರಸ್ತಾಪಿಸಿದೆ.

ರಾಜ್ಯ ಮಟ್ಟದ ಮೇಲ್ವಿಚಾರಣೆ ಕೋಶ : ಪ್ರಸ್ತುತ ರಾಜ್ಯ ಮಟ್ಟದಲ್ಲಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ವಿಶೇಷ ಆರ್ಥಿಕ ಕಾರ್ಯಕ್ರಮಗಳಿಗೆ ಎರಡು ಮೇಲ್ವಿಚಾರಣಾ ಕೋಶಗಳು ಕಾರ್ಯನಿರ್ವಹಿಸುತ್ತಿವೆ. ನಿರ್ದೇಶಕರು ಪ್ರದೇಶಾಭಿವೃದ್ಧಿ ಕಾರ್ಯಕ್ರಮ ಹಾಗೂ ನಿರ್ದೇಶಕರು ವಿಶೇಷ ಆರ್ಥಿಕ ಕಾರ್ಯಕ್ರಮಗಳು ಸಚಿವಾಲಯ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು , ಕೋಶಗಳ ಮುಖ್ಯಸ್ಥರಾಗಿರುತ್ತಾರೆ.

ಈ ಕಾರಣಗಳಿಂದ ಈ ರಾಜ್ಯ ಮಟ್ಟದ ಮೇಲ್ವಿಚಾರಣೆ ಕೋಶದ ಆಡಳಿತಾತ್ಮಕ ವೆಚ್ಚವನ್ನು ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರದ ಅನುಧಾನದಲ್ಲಿ ಭರಿಸಲು ಪ್ರಸ್ತಾಪಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ 285 ವಿಸೇಬಿ 99, ಬೆಂಗಳೂರು ದಿನಾಂಕ: 18-3-2000</u>

ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಮಂಜೂರಾತಿಯನ್ನು ನೀಡಲಾಗಿದೆ.

1. (ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಸುಧಾರಿಸಲು ಹಾಗೂ ಬಲಪಡಿಸುವ ದೃಷ್ಟಿಯಿಂದ, ರಾಜ್ಯದ ಪ್ರತಿ ಜಿಲ್ಲಾ ಪಂಚಾಯ್ತಿಗಳಲ್ಲಿ ಒಂದರಂತೆ ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಕೋಶವನ್ನು ಅನುಬಂಧ-1 ರಲ್ಲಿ ತಿಳಿಸಿರುವಂತೆ ಸೃಜಿಸಲಾಗಿದೆ.

(ಆ) ಪ್ರತಿ ಜಿಲ್ಲಾ ಪಂಚಾಯ್ತಿಗಳಲ್ಲಿ 81 ಹೊಸ ಹುದ್ದೆಗಳನ್ನು ಸೃಷ್ಟಿಸಿ ಅನುಬಂಧ-1, ಕಲಂ 4ರಲ್ಲಿ ತೋರಿಸಿದೆ.

(ಇ) 27 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಗಳು, 27 ಸಹಾಯಕ ಕಾರ್ಯದರ್ಶಿ ಹುದ್ದೆಗಳ ಸಂಬಳವನ್ನು ಜಿಲ್ಲಾ ಪಂಚಾಯ್ತಿಯ ನಿರ್ವಹಣಾ ವೆಚ್ಚದ ಅನುದಾನ ಲೆಕ್ಕ ಶೀರ್ಷಿಕೆ 2515 ರಲ್ಲಿ ಭರಿಸಲು ಆದೇಶಿಸಿದೆ.

(ಈ) ಜಿಲ್ಲಾ ಪಂಚಾಯ್ತಿಯ ಇಂಜನಿಯರಿಂಗ್ ವಿಭಾಗದ ಕೇಂದ್ರಸ್ಥಾನದ ಕಾರ್ಯಪಾಲಕ ಅಭಿಯಂತರರು ಇಂಜನಿಯರಿಂಗ್ ವಿಭಾಗದ ಮುಖ್ಯಸ್ಥರು ಹಾಗೂ ಡಿಆರ್‌ಡಿಎ ಸೆಲ್ ಗೆ ಸಂಬಂಧಿಸಿದ ಪದನಿಮಿತ್ತ ಕಾರ್ಯಪಾಲಕ ಅಭಿಯಂತರರಾಗಿರುತ್ತಾರೆ. ಈ 27 ಅಧಿಕಾರಿಗಳ ವೇತನ ಭತ್ಯೆಗಳನ್ನು ಲೆಕ್ಕ ಶೀರ್ಷಿಕೆ " 2059 ಪಿಡಬ್ಲ್ಯೂಡಿ-ಜಿಲ್ಲಾ ಪಂಚಾಯತ್ ಸೆಕ್ಟಾರ್ " ಅಡಿ ಭರಿಸುವುದು.

(ಉ) ಮಾನಿಟರಿಂಗ್ ಕೋಶದಲ್ಲಿನ 108 ಹುದ್ದೆಗಳ ವೇತನ ಭತ್ಯೆಗಳನ್ನು ಈಗ ಭರಿಸುತ್ತಿರುವ ಲೆಕ್ಕ ಶೀರ್ಷಿಕೆ " 3451 ಎಕನಾಮಿಕ್ ಸಚಿವಾಲಯ ಸೇವೆಗಳು " ಶೀರ್ಷಿಕೆಯಲ್ಲಿಯೇ ಭರಿಸುವುದು.

2. ಅ) ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶದ ಪ್ರಾಜೆಕ್ಟ್ ಆಫೀಸರ್ ಮತ್ತು ಸಹಾಯಕ ಪ್ರಾಜೆಕ್ಟ್ ಆಫಿಸರ್‌ಗಳನ್ನು ಈ ಕೆಳಕಾಣಿಸಿದಂತೆ ಭರ್ತಿ ಮಾಡುವುದು.

ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು, ಹಾಗು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅವರುಗಳನ್ನೊಳಗೊಂಡ ಸಮಿತಿಯು ಪ್ರಾಜೆಕ್ಟ್ ಆಫೀಸರ್, ಸಹಾಯಕ ಪ್ರಾಜೆಕ್ಟ್ ಆಫೀಸರ್‌ಗಳ ನೇಮಕಾತಿಯ ಬಗ್ಗೆ ಅಧಿಕಾರಿಗಳ ಸೂಕ್ತತೆಯನ್ನು ಪರಿಶೀಲಿಸುವುದು. ಈ ಹುದ್ದೆಗಳಿಗೆ ಈ ಕೆಳಕಾಣಿಸಿದ ಇಲಾಖೆಗಳಿಂದ ಅಧಿಕಾರಿಗಳ ಸೇವೆಯನ್ನು ಪಡೆಯುವುದು.

1. ಕರ್ನಾಟಕ ಆಡಳಿತ ಸೇವೆಗಳು
2. ಕೃಷಿ ಇಲಾಖೆ
3. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
4. ಮಹಿಳಾ ಅಭಿವೃದ್ಧಿ ಇಲಾಖೆ,
5. ಸಹಕಾರ ಇಲಾಖೆ
6. ರಾಷ್ಟ್ರೀಕೃತ ಬ್ಯಾಂಕುಗಳು.

ಆ) ತಾಂತ್ರಿಕ ಸಹಾಯಕರ ಹುದ್ದೆಗಳನ್ನು ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳಿಂದ ಇವರುಗಳು ಸಹಾಯಕ ಪ್ರಾಜೆಕ್ಟ್ ಅಧಿಕಾರಿಗಳಿಗೆ ಜಲಾನಯನ ಅಭಿವೃದ್ಧಿ ಯೋಜನೆಗಳಿಗೆ ನೆರವಾಗುವಂತೆ ತುಂಬುವುದು .

ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶದ ಎಲ್ಲಾ ಹುದ್ದೆಗಳನ್ನು ಈಗಾಗಲೇ ಜಿಲ್ಲಾ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಮರು ಹೊಂದಾಣಿಕೆ ಮಾಡುವ ಮೂಲಕ ಮತ್ತು ಇತರೆ ಇಲಾಖೆಗಳಿಂದ ಮರು ವಿನ್ಯಾಸಗೊಳಿಸುವ ಮೂಲಕ ತುಂಬತಕ್ಕದ್ದು .ರಾಜ್ಯ ಸರ್ಕಾರದ ಒಟ್ಟಾರೆ ಸಿಬ್ಬಂದಿ ಬಲಕ್ಕೆ ಇದರಿಂದಾಗಿ ಯಾವುದೇ ಹೆಚ್ಚಿನ ಸೇರ್ಪಡೆ ಇರಬಾರದು.

ಅನುಬಂಧ-3 ರಲ್ಲಿ ಹೇಳಿರುವ ರಾಜ್ಯ ಮಟ್ಟದ ಮೇಲ್ವಿಚಾರಣಾ ಕೋಶದ ವೆಚ್ಚವನ್ನು ಜಿಲ್ಲಾ ಗ್ರಾಮೀಣಾಭಿವೃದ್ಧಿ ಕೋಶದ ಪ್ರಾಧಿಕಾರದ ವೆಚ್ಚದಿಂದ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ198-ವೆಚ್ಚ-6-2000,ದಿನಾಂಕ 15-2-2000 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಪಿಡಿ 128-ಡಿಪಿಡಿ-99, ದಿನಾಂಕ 14-1-2000ದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎ. ಎಸ್. ಕಾಂತರಾಜು 18.3.2000
(ಎ.ಎಸ್. ಕಾಂತರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಕಾರ್ಯದರ್ಶಿಗಳು: ಅಪರ ಮುಖ್ಯ ಕಾರ್ಯದರ್ಶಿಗಳು: ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ರವರ ಆಪ್ತ ಕಾರ್ಯದರ್ಶಿಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಮಾನ್ಯ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಆಪ್ತ ಸಹಾಯಕರು.
7. ಎಲ್ಲಾ [illegible], ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ [illegible] (ಆರ್.ಡಿ.ಪಿ.),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

Annexure – 1 to G.O.No.RDP 285 VSB 99, dated 16.3.2000
Posts coming under DRDA Administration Cell

| SlNo | Designation | Pay Scale | Total No. of Posts | New Posts created out of colum 4 | Cost met from (Head of Account) |
|---|---|---|---|---|---|
| 1 | 2 | 3 | 4 | 5 | 6 |
| 1 | Project Management wing<br>1) CEO: Ex Officio Project Director | IAS Scale | 27 | | 2515 Z.P. Maintaince |
| 2 | Self Employmeent –wing | | | | |
| | 1) Projct director/ project officer | 10620—14960 | 27 | 27 | |
| | 2). Assistant Project officer | 6000—11200 | 27 * | | |
| | JE Engineers. (TA) | 4575- 8400. | 94 | | |
| | 3) First Division Assistana ~~(TA)~~ | 3850—7050 | 54 | | |
| | 4) Second Division Assistant | 3000—5450 | 54 | | |
| | 5) Typist | 3000--5450 | 27 | | |
| 3 | WAGE Employment and Water Shed Wing | | | | |
| | 1) Deputy Secretary/ Project officer | 10620-14960 | 27 | | |
| | 2) Assistant project offier/ Assistant director of Agriculture | 7400—13120 | 27 | 27 | |
| | 3) Assistant Project officer/Assistant Seceretary | 7400—13120 | 27 | | |
| | 4) Junior Engineer (TA) | 4575-8400 | 27** | | |
| | 5) First Division Assistant | 3850-7050 | 27 | | |
| | 6) Second Division Assistant | 3000-5450 | 54 | | |
| | 7) Typist | 3000-5450 | 27 | | |
| | 8) Technical Assistant(AAO) | 4575-8400 | 27 | 27 | |
| 4 | Engineering Wing E.E. Z.P. Division & Ex Officio<br>1)Executive Engineer<br>2)Technical Asst. (J.E.) | (10260-14960)<br>(3850-7050) | 27<br>54 ** | | 2059 PWD/ Z.P.Sector |
| 5 | Finance Wing<br>1)Accounts Officer<br>2)Accounts Suptd.<br>3) F.D.A.<br>4) S.D.A. | (7400-13120)<br>(5575-10620)<br>(3850-7050)<br>(3000-5450) | 27<br>27<br>81<br>54 | | |
| | | | | | |

| | | | | | |
|---|---|---|---|---|---|
| 6 | Genral Administration Wing | | | | |
| | 1) Superintendent | (5200-9580) | 27 | | |
| | 2) F.D.A. | (3850-7050) | 54 | | |
| | 3) Stenographer | (3850-7050) | 54 | | |
| | 4) S.D.A. | (3000-5450) | 27 | | |
| | 5) Typist | (3000-5450) | 27 | | |
| | 6) Driver | (3000-5450) | 81*** | | |
| | 7) Group ' D ' | (2500-3850) | 108 | | |
| 7 | Monitoring Wing | | | | |
| | 1) Project Appraisal Evaluation Officer | (7400-13120) | 27 | | |
| | 2) Asst. Stastical Officer | (6000-11200) | 27 | | 3451 Economic Services |
| | 3) S.D.A. | (3000-5450) | 27 | | |
| | 4) Typist | (3000-5450) | 27 | | |
| | Total | | 1215 | 81 | |

Note: (X) These posts are shifted from DWACRA Scheme (Assistant Project Officer Posts)
(XX) These 81 Posts are (27+54) shifted from J.R.Y. Scheme (Block Level Posts)
(XXX) Out of this 27 Posts are shifted from DWACRA Scheme.

(A.S.KANTHARAJU)
Under Secretary to Government(Ser-B)
Rural Development & Panchayath Raj Department

**Annexure-2 to G.O.No.RDP 285 VSB 99, Dated: 18 3.2000**

## Zilla Panchayath staffing pattern
## (As per GO.No.RDP 163 PBV 97, dated 18.9.1988)

| Sl.No. | Designation of Post | Pay scale | Total No.of posts | Posts shifted to DRDA Administration out of posts shown under Clomn-4 |
|---|---|---|---|---|
| 1 | 2 | 3 | | |
| 1 | Chief Executive Officer | IAS Scale | 4 | |
| 2 | Deputy Secretary-I | 10620-14960 | 27 | 5 |
| 3 | Deputy Secretary-II | 10620-14960 | 27 | 27 |
| 4 | Chief Accounts Officer | 10620-14960 | 27 | 27 |
| 5 | Council Secretary | 9580-14200 | 27 | |
| 6 | Chief Planning Officer | 10620-14960 | 27 | |
| 7 | Asst. Secretary(Admn) | 8000-13440 | 27 | |
| 8 | Asst. Secretary(Dev) | 8000-13440 | 27 | |
| 9 | Accounts Officer | 7400-13120 | 13 | 27 |
| 10 | Project Appraisal & Evaluation Officer | 7400-13120 | 54 | |
| 11 | Regional Planning Officer/Statistical Officer | 6000-11200 | 39 | 27 |
| 12 | Accounts Superintendent/Superintendent | 5575-10620 | 40 | 27 |
| 13 | Asst. Statistical Officer | 5200-9580 | 208 | 6 |
| 14 | Planning Assistant | 6000-11200 | 18 | 54 |
| 15 | Stenographer | 4575-8400 | 28 | 13 |
| 16 | First Division Asst. | 3850-7050 | 211 | - |
| 17 | Typist | 3850-7050 | 534 | 54 |
| 18 | Second Division Asst. | 3000-5450 | 198 | 216 |
| 19 | Record Keeper | 3000-5450 | 335 | 108 |
| 20 | Drivers | 3000-5450 | 27 | 216 |
| 21 | Group-D | 3000-5450 | 119 | - |
| 22 | Binders | 2500-3850 | 380 | 54 |
| 23 | D.E.O | 2500-7050 | 27 | 108 |
| | Total | 3850-7050 | 24 | - |
| | | | 2428 | - |
| | | | | 972 |

4575-9460

(A.S.KANTHARAJU) 18/3
Under Secretary to Govt(Services-II)
Rural Development & Panchayath Raj
Department

27

…nexure-3 to G.O. NO.RDP 285 PBV 99, Bangalore, dated 16 18.3.2000

**Special Economic programmes Monitoring Cell:**

| Designation | No.of Posts |
|---|---|
| 1.Joint Director | 1 |
| 2. Dy. Director | 1 |
| 3. Asst. Directors | 2 |
| 4.Asst. Statistical Officers | 3 |
| 5.First Dvn. Asst. | 1 |
| 6.Stenographers | 2 |
| 7.Second Dvn. Asst. | 1 |
| 8.Typists | 2 |
| **Total** | **13** |

**Area Development Programmes Monitoring Cell:**

| Designation | No.of Posts |
|---|---|
| 1. Senior Dy.Director | 1 |
| 2.Dy. Directors | 4 |
| 3.Asst. Directors | 2 |
| 4.Shirasthedars | 3 |
| 5.Statistical Assts. (Asst. Statistical Officer — Correction) | 2 |
| 6.First Dvn. Assts. | 2 |
| ~~7.Assistants~~ | ~~2~~ d. |
| 8. Stenographers | 2 |
| 9.Second Dvn. Assts. | 3 |
| 10.Typist | 1 |
| 11.Driver | 1 2 |
| 12.Dalayats | 2 3 |
| **Total** | **25** |

18.3.2000

(A.S.KANTHARAJU)
Under Secretary to Govt(Services-B)
Rural Development & Panchayath Raj
Department

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ) ರವರ ಬೇಡಿಕೆಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯ ವರದಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ), ರವರ ಬೇಡಿಕೆಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯ ವರದಿ ಸಲ್ಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 351 ಪಬವ 2018, ದಿನಾಂಕ:21-09-2019 ಮತ್ತು 24-09-2019.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ), ಇವರು ಸಲ್ಲಿಸಿದ್ದ ಮನವಿಯಲ್ಲಿನ ಕೋರಿಕೆ/ಬೇಡಿಕೆಗಳನ್ನು ನಿಯಮಾನುಸಾರ ಪರಿಶೀಲಿಸಿ ವರದಿ ನೀಡಲು ಉಲ್ಲೇಖದಲ್ಲಿನ ಆದೇಶದನ್ವಯ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಮನವಿಯಲ್ಲಿನ ಬೇಡಿಕೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಸರ್ಕಾರದ ಆದೇಶಗಳಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ವಿವರವಾಗಿ ಚರ್ಚಿಸಿ, ವರದಿಯನ್ನು ಸಿದ್ಧಪಡಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿಗಳು,

ಅಪರ್ಣಾ ಪಾವಟೆ,
ಸರ್ಕಾರದ ಉಪ ಕಾರ್ಯದರ್ಶಿ (ಆ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಿದ್ದೇಶ್ ಮೋಟಲಕಟ್ಟಿ,
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಎಸ್.ಎ.ಅಶ್ರಫುಲ್ ಹಸನ್,
ನಿರ್ದೇಶಕರು (ಪಂ.ರಾಜ್-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಕೆ.ರೇವಣಪ್ಪ,
ನಿರ್ದೇಶಕರು, (ಗ್ರಾ.ಮೂ.ಸೌ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಡಾ|| ಸಿ.ಸಿದ್ದರಾಮಯ್ಯ,
ಉಪ ಕಾರ್ಯದರ್ಶಿ,
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ

ಶ್ರೀನಿವಾಸ ಮಾದಂಗಪ್ಪನವರ್,
ಮುಖ್ಯ ಕಾರ್ಯಾಚರಣೆ ಅಧಿಕಾರಿ,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಜಗದೀಶ್ ಕೆ.ಎಸ್.
ಸಹಾಯಕ ನಿರ್ದೇಶಕರು (ಗ್ರಾ.ಉ.)
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

| ಕ್ರ. ಸಂ. | ಬೇಡಿಕೆ ಸಂಖ್ಯೆ | ಸಂಘದ ಕೋರಿಕೆ | ಇಲಾಖೆಯ ಷರಾ | ಸಮಿತಿಯ ಶಿಫಾರಸ್ಸು |
|---|---|---|---|---|
| 1 | 3 | <u>ಪಂಚಾಯತ್ ರಾಜ್ ಸೇವೆಗಳಿಗೆ ಆಯುಕ್ತಾಲಯ ಸ್ಥಾಪಿಸುವುದು:-</u> ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಸುಗಮವಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲ ಮಾಡಿಕೊಡುವ ದಿಸೆಯಲ್ಲಿ ಆಡಳಿತ, ಪರಿವೀಕ್ಷಣೆ, ಮೇಲ್ವಿಚಾರಣೆ, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು, ಹುದ್ದೆಗಳ ಪ್ರವರ್ಗಗಳ ಸಂಖ್ಯೆ, ನೇಮಕಾತಿ ವಿಧಾನಗಳ ನಿಯಮಗಳನ್ನು ರೂಪಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 232–ಎ ರಂತೆ ಪಂಚಾಯತ್ ರಾಜ್ ಸೇವೆಗಳಿಗೆಂದೇ ಆಯುಕ್ತಾಲಯ ಸ್ಥಾಪನೆಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರ ಪ್ರಕರಣ 232–ಎ ರಲ್ಲಿ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಪಂಚಾಯತ್ ರಾಜ್ ಆಯುಕ್ತಾಲಯ ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಆರ್ಥಿಕ ಇಲಾಖೆಯು ಪ್ರಸ್ತುತ ಮುಂದಿನ 4 ವರ್ಷಗಳಲ್ಲಿ ರೈತರ ಸಾಲ ಮನ್ನಾ ಮತ್ತು 6ನೇ ವೇತನ ಆಯೋಗದಿಂದ ಆಗುವ ಹೆಚ್ಚುವರಿ ವೇತನ ವೆಚ್ಚಗಳಿಂದ ಆಗುವ ಹೆಚ್ಚುವರಿ ಅನುದಾನದ ಹೊರೆಯನ್ನು ಭರಿಸಬೇಕಾಗಿರುವುದರಿಂದ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಸೃಜಿಸಲು ಕೋರಿರುವ ಹೆಚ್ಚುವರಿ ಹುದ್ದೆಗಳ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪಲು ಸಾಧ್ಯವಿಲ್ಲವೆಂದು ದಿನಾಂಕ:07–09–2018ರ ಟಿಪ್ಪಣಿಯಲ್ಲಿ ತಿಳಿಸಿರುತ್ತದೆ. | ಪ್ರಸ್ತುತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿರುವ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣ ಕುಡಿಯುವ ನೀರು ಆಯುಕ್ತಾಲಯದೊಂದಿಗೆ ಪಂಚಾಯತ್ ರಾಜ್ ಆಯುಕ್ತಾಲಯವನ್ನು ರಚಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರ ಪ್ರಕರಣ 232–ಎ ಅವಕಾಶವಿರುತ್ತದೆ. ಈ ಕುರಿತಂತೆ ಈಗಾಗಲೇ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲಾಗಿದ್ದು, ಆರ್ಥಿಕ ಮಿತವ್ಯಯದ ಕಾರಣ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿರುವುದಿಲ್ಲ. ಹಾಲಿ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳನ್ನು ಸದರಿ ಆಯುಕ್ತಾಲಯಕ್ಕೆ ಸ್ಥಳಾಂತರಿಸಿದ ನಂತರ ಅವಶ್ಯವಿರುವ ಹೆಚ್ಚುವರಿ ಹುದ್ದೆಗಳನ್ನು ಮಾತ್ರ ಸೃಜಿಸುವ ಬಗ್ಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲು ಹಾಗೂ ಪಂಚಾಯತ್ ರಾಜ್ ಆಯುಕ್ತಾಲಯವನ್ನು ಸೃಜಿಸಲು ತ್ವರಿತ ಕ್ರಮ ವಹಿಸಲು ಸಮಿತಿಯಲ್ಲಿ ಚರ್ಚೆಯಾಗಿದ್ದು, ಅದರಂತೆ ಸಂಬಂಧಪಟ್ಟ ಶಾಖೆಗಳು ಕ್ರಮವಹಿಸಲು ಶಿಫಾರಸ್ಸು ಮಾಡಲಾಗಿದೆ.<br><br>ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಗೆ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಉದ್ದೇಶಿಸಿರುವ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಸ್ಥಳಾಂತರಿಸಬೇಕೆಂದು ಹಾಗೂ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಉಪಬಂಧಗಳನ್ನು ಮಾರ್ಪಡಿಸಿ ಪ್ರತ್ಯೇಕ ಮುಂಬಡ್ತಿ ಅವಕಾಶಗಳನ್ನು ಕೈಬಿಡುವಂತೆ ಹಾಗೂ ಎಲ್ಲಾ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಇರುವ ಸಮನಾಂತರ ಹುದ್ದೆಗಳಿಗೆ ವಿಲೀನಗೊಳಿಸಬೇಕೆಂದು ಚರ್ಚಾ ಸಂದರ್ಭದಲ್ಲಿ ಸಂಘದ ಸದಸ್ಯರು ಒತ್ತಾಯಿಸಿರುತ್ತಾರೆ.<br><br>ಪ್ರಸ್ತುತ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಆಯುಕ್ತಾಲಯಗಳ ಕಾರ್ಯಕಾರಿ ಹುದ್ದೆಗಳಿಗೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) ಅಧಿಕಾರಿಗಳನ್ನು ನೇಮಿಸುವ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ |

| | | | | |
|---|---|---|---|---|
| | | | | ಮಾಡಬೇಕೆಂದು ಸಂಘದ ಸದಸ್ಯರು ಒತ್ತಾಯಿಸಿರುತ್ತಾರೆ.<br><br>ಸಂಘದ ಸದಸ್ಯರ ಕೋರಿಕೆಗಳು ಸಮಂಜಸವಾಗಿವೆ. ಇತರೆ ಇಲಾಖೆಗಳ ಅಧಿಕಾರಿಗಳನ್ನು ನೇಮಿಸುವ ಮೂಲಕ ವಿವಿಧ ವೃಂದಗಳ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ಕಲ್ಪಿಸಿದಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳಿಗೆ ತೊಡಕುಗಳು ಉಂಟಾಗುವ ಸಾಧ್ಯತೆ ಇರುವುದರಿಂದ ಹಾಗೂ ಇಲಾಖೆಯ ಅಧಿಕಾರಿಗಳು ಇಲಾಖೆಯ ವಿಷಯಗಳ ಬಗ್ಗೆ ಹೆಚ್ಚು ಅನುಭವ ಹಾಗೂ ಪರಿಣಿತಿ ಹೊಂದಿರುವುದರಿಂದ ಇಲಾಖೆಯ ಅಧಿಕಾರಿಗಳನ್ನೇ ನೇಮಿಸುವುದು ಸೂಕ್ತವಾಗಿದ್ದು, ಈ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯನ್ನು ಸಹ ತರಲು ಸಮಿತಿಯು ಶಿಫಾರಸ್ಸು ಮಾಡಿದೆ. ಅಲ್ಲದೆ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ವಿವಿಧ ವೃಂದಗಳ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಯ ಸಮಾನಾಂತರ ವೃಂದಗಳಲ್ಲಿ ಸೇರ್ಪಡೆ ಮಾಡುವುದು ಸಹ ಸೂಕ್ತವೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 2 | 4 | <u>ಕರ್ನಾಟಕ ಪಂಚಾಯತ್ ರಾಜ್ ಆಡಳಿತಾತ್ಮಕ ಸೇವೆಯನ್ನು ಜಾರಿಗೊಳಿಸುವುದು:-</u><br>ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 232-ಬಿ ರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಹುದ್ದೆಗಳ ಪ್ರವರ್ಗವನ್ನು ಒಳಗೊಡಂತೆ, ಹುದ್ದೆಗಳ ಸಂಖ್ಯೆ, ವೇತನಶ್ರೇಣಿ, ನೇಮಕಾತಿ ವಿಧಾನಗಳ ನಿಯಮಗಳನ್ನು ರೂಪಿಸಿ, ಕರ್ನಾಟಕ ಪಂಚಾಯತ್ ರಾಜ್ ಆಡಳಿತಾತ್ಮಕ ಸೇವೆಯನ್ನು ಜಾರಿಗೊಳಿಸಲು ಕ್ರಮವಹಿಸಬೇಕಾಗಿರುತ್ತದೆ. | ಹಾಲಿ ಚಾಲ್ತಿಯಲ್ಲಿರುವ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ರದ್ದುಗೊಳಿಸಿ ಅದರ ಬದಲಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 232-ಬಿ ರಂತೆ ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆಯ ಸೃಜನೆಗೆ ಸಂಬಂಧಿಸಿದ ನಿಯಮಗಳನ್ನು ರೂಪಿಸಬೇಕಾಗಿರುತ್ತದೆ. | "ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆ"ಗೆ ಸಂಬಂಧಿಸಿದಂತೆ ಹೊಸದಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 232-ಬಿ ರಂತೆ ನಿಯಮಗಳನ್ನು ರೂಪಿಸಬೇಕಾಗಿರುತ್ತದೆ. ಈಗಾಗಲೇ ಇದೇ ಮಾದರಿಯಲ್ಲಿ ಕರ್ನಾಟಕ ಮುನಿಸಿಪಲ್ ಆಡಳಿತ ಸೇವಾ ನಿಯಮಗಳನ್ನು ರೂಪಿಸಲಾಗಿದ್ದು, ಅದನ್ನು ಆಧರಿಸಿ ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆ ನಿಯಮಗಳನ್ನು ಆದಷ್ಟು ತ್ವರಿತವಾಗಿ ರೂಪಿಸಲು ಇಲಾಖಾ ವತಿಯಿಂದ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 3 | 5 | <u>ಜಿಲ್ಲಾ ಪಂಚಾಯಿತಿ ಹಂತದಲ್ಲಿ ಕಂದುಕೊರತೆ ನಿವಾರಣಾ ಪ್ರಾಧಿಕಾರ ರಚಿಸುವುದು:-</u><br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 296-ಎ ರಂತೆ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 296ಎ ರಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಕುಂದು ಕೊರತೆ ನಿವಾರಣಾ ಪ್ರಾಧಿಕಾರವನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ. ಅದರನ್ವಯ ಪ್ರಾಯೋಗಿಕವಾಗಿ 4 ಜಿಲ್ಲೆಗಳಲ್ಲಿ | **26.09.2019:** ಪ್ರಸ್ತುತ ರಾಜ್ಯದ 4 ಜಿಲ್ಲೆಗಳಲ್ಲಿ ಮಾತ್ರ ಕುಂದುಕೊರತೆ ವಿಚಾರಣೆ ಪ್ರಾಧಿಕಾರವು ಮಂಜೂರಾಗಿದ್ದು, ಈ ಪೈಕಿ 2 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕುಂದುಕೊರತೆ ಪ್ರಾಧಿಕಾರವನ್ನು ಪ್ರಾರಂಭಿಸಲಾಗಿದೆ. ಹಾಗಾಗಿ ಮಂಜೂರಾಗಿರುವ 4 ಜಿಲ್ಲೆಗಳ ಪೈಕಿ ಇನ್ನು 2 ಜಿಲ್ಲೆಗಳಿಗೆ ಕುಂದುಕೊರತೆ ಪ್ರಾಧಿಕಾರವನ್ನು ಪ್ರಾರಂಭಿಸುವುದು ಅವಶ್ಯವೆಂದು |

| | | | | |
|---|---|---|---|---|
| | | ಪ್ರತಿಯೊಂದು ಜಿಲ್ಲಾ ಪಂಚಾಯತಿಯಲ್ಲಿ ಕುಂದುಕೊರತೆ ನಿವಾರಣಾ ಪ್ರಾಧಿಕಾರಿಯನ್ನು ನೇಮಿಸಿ, ಅವಶ್ಯಕ ಸಿಬ್ಬಂದಿಯನ್ನು ಒದಗಿಸಿ, ಲೋಕಾಯುಕ್ತ, ಓಂಬಡ್ಸ್‌ಮನ್ ಮುಂದೆ ದಾಖಲಾಗುತ್ತಿರುವ ಎಲ್ಲಾ ಪ್ರಕರಣಗಳ ಕಾಲ ವಿಳಂಬವನ್ನು ತಪ್ಪಿಸಿ, ದೂರು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಕ್ಷಿಪ್ರವಾಗಿ ಜಿಲ್ಲಾ ಪಂಚಾಯತಿ ಹಂತದಲ್ಲಿಯೇ ಕಂದುಕೊರತೆ ನಿವಾರಣಾ ಪ್ರಾಧಿಕಾರವು ವಿಲೇ ಮಾಡಲು ಕ್ರಮವಹಿಸುವುದು. | ಅಂದರೆ ಬೆಳಗಾವಿ, ಬೆಂಗಳೂರು ನಗರ, ಚಿಕ್ಕಮಗಳೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕುಂದು ಕೊರತೆ ನಿವಾರಣಾ ಪ್ರಾಧಿಕಾರವನ್ನು ರಚಿಸಲಾಗಿದ್ದು, ಪ್ರಸ್ತುತ 2 ಜಿಲ್ಲೆಗಳಲ್ಲಿ ಅಂದರೆ ಬೆಳಗಾವಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾತ್ರ ಕುಂದುಕೊರತೆಯ ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿವೆ. ಇನ್ನುಳಿದ 26 ಜಿಲ್ಲೆಗಳಲ್ಲಿ ಕುಂದು ಕೊರತೆ ನಿವಾರಣಾ ಪ್ರಾಧಿಕಾರ ಸ್ಥಾಪಿಸಲು ಹಾಗೂ ಅನುದಾನ ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಆದರೆ ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಗೆ ಸಹಮತಿ ನೀಡಿರುವುದಿಲ್ಲ. | ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಯಿತು.<br><br>ಪ್ರಸ್ತುತ ಕುಂದುಕೊರತೆ ಪ್ರಾಧಿಕಾರಕ್ಕೆ ವಿವಿಧ ಇಲಾಖೆಗಳ ನಿವೃತ್ತ ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಸಮಿತಿಯ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಲಾಗಿದ್ದು, ಕುಂದುಕೊರತೆ ಪ್ರಾಧಿಕಾರಕ್ಕೆ ನೇಮಕವಾಗುವ ಬೇರೆ ಬೇರೆ ಇಲಾಖೆಗಳ ನಿವೃತ್ತ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಚಟುವಟಿಕೆ ಮತ್ತು ಕಾಯ್ದೆ ಮತ್ತು ಅದರಡಿ ರೂಪಿಸಿರುವ ವಿವಿಧ ನಿಯಮಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಹಾಗಾಗಿ ಜಿಲ್ಲಾ ಪಂಚಾಯತಿ / ತಾಲ್ಲೂಕು ಪಂಚಾಯತಿ / ಗ್ರಾಮ ಪಂಚಾಯತಿಗಳ ಕುಂದು ಕೊರತೆಗೆ ಸಂಬಂಧಿಸಿದಂತೆ ದಾಖಲಾಗುವ ದೂರು ಅರ್ಜಿಗಳ ಕುರಿತು ಸಮರ್ಪಕ ನಿರ್ಣಯ ಕೈಗೊಳ್ಳಲು ಹಾಗೂ ಸದರಿ ಅರ್ಜಿಗಳನ್ನು ತ್ವರಿತವಾಗಿ ವಿಲೇಗೊಳಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಬದಲಾಗಿ ಇಲಾಖೆಯ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಅಧಿಕಾರಿಗಳನ್ನು ಕುಂದು ಕೊರತೆ ಪ್ರಾಧಿಕಾರದ ಮುಖ್ಯಸ್ಥರನ್ನಾಗಿ ನೇಮಿಸಿ ಅವಶ್ಯವಿರುವ ಸಿಬ್ಬಂದಿಗಳನ್ನು ಸದರಿ ಪ್ರಾಧಿಕಾರಕ್ಕೆ ನೇಮಿಸಿದ್ದಲ್ಲಿ ಪಂಚಾಯತ್ ರಾಜ್ ಸಮಸ್ಯೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾಯಿತು. ಹೆಚ್ಚಿನ ತಾಲ್ಲೂಕುಗಳನ್ನು ಹೊಂದಿರುವ ಜಿಲ್ಲೆಗಳಿಗೆ ಅಂದರೆ; ಬೆಳಗಾವಿ, ತುಮಕೂರು, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಆಯ್ಕೆ ಶ್ರೇಣಿ ವೃಂದದ ಅಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಉಳಿದ ಜಿಲ್ಲೆಗಳಿಗೆ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಅಧಿಕಾರಿಯನ್ನು ಕುಂದು ಕೊರತೆ ಪ್ರಾಧಿಕಾರಕ್ಕೆ ನೇಮಿಸುವುದು ಸಮಂಜಸವೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.<br><br>ಜೊತೆಗೆ ಹಾಲಿ ಮಂಜೂರಾಗಿರುವ 4 ಜಿಲ್ಲೆಗಳನ್ನು ಹೊರತುಪಡಿಸಿ ಇನ್ನುಳಿದ 26 ಜಿಲ್ಲೆಗಳಲ್ಲಿಯೂ ಸಹ ಕುಂದು ಕೊರತೆ ಪ್ರಾಧಿಕಾರಗಳನ್ನು ಸ್ಥಾಪಿಸಲು ಇಲಾಖಾ ಹಂತದಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕೆಂದು ಸಹ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 4 | 6 | <u>ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಹುದ್ದೆಯನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದಕ್ಕೆ ಉನ್ನತೀಕರಿಸುವುದು:-</u><br><br>ಇಲಾಖೆಯಲ್ಲಿ 20 ವರ್ಷಗಳ ಹಿಂದೆ ಸೃಜನೆಯಾದ ಜಿಲ್ಲಾ | ಪ್ರಸ್ತುತ ವೃಂದ ಮತ್ತು ನೇಮಕಾತಿ ನೇಮಕಾತಿ ನಿಯಮಗಳನ್ವಯ 13 ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದಲ್ಲಿ ಮಂಜೂರಾದ ಹುದ್ದೆಗಳಿರುತ್ತವೆ. (ವೇತನ ಶ್ರೇಣಿ ರೂ.82,000-1,17,700)<br><br>ಜಿಲ್ಲೆಗೊಂದರಂತೆ ಒಟ್ಟು 30 | ಪ್ರಸ್ತುತ ಆಯ್ಕೆ ಶ್ರೇಣಿ ಹುದ್ದೆಯು ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಮುಂಬಡ್ತಿ ಹುದ್ದೆಯಾಗಿರುತ್ತದೆ. ಆದರೆ ಸದರಿ ವೃಂದಕ್ಕೆ ವೇತನ ಶ್ರೇಣಿ ರೂ.82,000-1,17,700 ಯನ್ನು ನಿಗಧಿ ಪಡಿಸಿರುವುದು ಸಮರ್ಪಕವಾಗಿರುವುದಿಲ್ಲ. ಈ ವೇತನ ಶ್ರೇಣಿಯು ಟೈಂ ಬೌಂಡ್ ಶ್ರೇಣಿಯಾಗಿರುತ್ತದೆ. ಹಾಗಾಗಿ ಮೊದಲಿಗೆ ಆಯ್ಕೆ ಶ್ರೇಣಿ ವೃಂದಕ್ಕೆ ಸಚಿವಾಲಯದ ಜಂಟಿ ಕಾರ್ಯದರ್ಶಿ ವೃಂದದ |

| | | | | |
|---|---|---|---|---|
| | | ಪಂಚಾಯಿತಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಹುದ್ದೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಒಂದೇ ಹುದ್ದೆಯಲ್ಲಿ 15-20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಕಾಲಕಾಲಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಸ್ತಾರವಾಗಿದ್ದು, ಯೋಜನೆ, ಕಾರ್ಯ ಕ್ರಮಗಳು, ಜವಾಬ್ದಾರಿಗಳು ಜಾಸ್ತಿಯಾಗಿರುತ್ತದೆ. ಆದ್ದರಿಂದ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ಯ ಅಧಿಕಾರಿಗಳ ವಿವಿಧ ವರ್ಗಗಳ ವೃಂದಬಲವನ್ನು ಪುನರ್ ನಿಗಧಿಪಡಿಸಿ, ಜಿಲ್ಲೆಗೊಂದಂತೆ 30 ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಹುದ್ದೆಗಳನ್ನು ಆಯ್ಕೆ ವೇತನ ಶ್ರೇಣಿ ವೃಂದಕ್ಕೆ ವೃಂದಬಲವನ್ನು ಪುನರ್ ನಿಗಧಿಪಡಿಸಿ ಉನ್ನತೀಕರಿಸುವುದು ಸೂಕ್ತವಾಗಿರುತ್ತದೆ. | ಜಿಲ್ಲೆಗಳಿಗೆ 30 ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ದರ್ಜೆಯ ಅಪರ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ಹುದ್ದೆಗಳನ್ನು ಸೃಜಿಸಲು ಈ ಹಿಂದೆ ಆರ್ಥಿಕ ಇಲಾಖೆಯ ಸಹಮತಿ / ಅಭಿಪ್ರಾಯಕ್ಕಾಗಿ ಕಡತವನ್ನು ಕಳುಹಿಸಿಕೊಡಲಾಗಿದ್ದು, ಪ್ರಸ್ತಾವನೆಯನ್ನು 2 ವರ್ಷಗಳ ಮಟ್ಟಿಗೆ ಆರ್ಥಿಕ ಇಲಾಖೆಯು ಮುಂದೂಡಿರುತ್ತದೆ.<br><br>ಈ ಹಿಂದೆ 41 ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ)ಯ ಶಾಶ್ವತ ಹುದ್ದೆಗಳಿದ್ದು, ಇದಕ್ಕೆ ಶೇ.32 ರಷ್ಟು ಅಂದರೆ 13 ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಮಂಜೂರಾಗಿರುತ್ತವೆ.<br><br>ಪ್ರಸ್ತುತ 58 ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ)ಯ ಶಾಶ್ವತ ಹುದ್ದೆಗಳಿರುತ್ತವೆ. ಅಲ್ಲದೆ ಇಲಾಖೆಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಜೂರಾಗಿರುವ ಹುದ್ದೆಗಳನ್ನು ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದಿಂದ ಭರ್ತಿ ಮಾಡಲು ವೃಂದೀಕರಿಸುವ ಸಲುವಾಗಿ ಸಿಆಸು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿರುತ್ತದೆ. ಸಿಆಸು ಇಲಾಖೆಯ ಅಭಿಪ್ರಾಯದ ನಂತರ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದಕ್ಕೆ ನಿಗಧಿಯಾಗುವ ಒಟ್ಟು ಹುದ್ದೆಗಳ ಪೈಕಿ ಶೇ 32 ರಷ್ಟು ಹುದ್ದೆಗಳನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದಕ್ಕೆ ಉನ್ನತೀಕರಿಸುವ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ. | ವೇತನ ಶ್ರೇಣಿಯನ್ನು (90,500-1,23,300) ಮಂಜೂರು ಮಾಡುವ ಬಗ್ಗೆ ಇಲಾಖಾ ಹಂತದಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಪ್ರಸ್ತುತ ಇರುವ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಹುದ್ದೆ ಪದನಾಮದ ಬದಲಾಗಿ ಜಂಟಿ ಕಾರ್ಯದರ್ಶಿ ಎಂಬ ಪದನಾಮವನ್ನು ಪುನರ್ ಪದನಾಮೀಕರಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 5 | 7 | <u>ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಶೇ.100ರಷ್ಟು ಹುದ್ದೆಗಳನ್ನು ಇಲಾಖೆಯ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಬಡ್ತಿ ನೀಡಲು ಅವಕಾಶ ಕಲ್ಪಿಸುವುದು.</u> | ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದಕ್ಕೆ ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕಾರ್ಯದರ್ಶಿ (ಪಂಚಾಯತ್ ರಾಜ್) ವೃಂದದಿಂದ ಶೇ.100 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡಲು, ಹಾಲಿ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕೆಳಸ್ಥರದಲ್ಲಿ ಅಂದರೆ; ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಂತರದ ಹುದ್ದೆಗಳಿಗೆ ಮುಂಬಡ್ತಿಯ ಅವಕಾಶಗಳು ತುಂಬ ಕಡಿಮೆ ಇರುತ್ತವೆ. ಹಾಗಾಗಿ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಕೆಲವು ಹುದ್ದೆಗಳನ್ನು ಇತರೆ |

| | | | | |
|---|---|---|---|---|
| | | ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಯ ಉಪ ಕಾರ್ಯದರ್ಶಿ (ಆ–1) ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದ ಹುದ್ದೆಯಲ್ಲಿ ಶೇ 22 ರಷ್ಟು ಕರ್ನಾಟಕ ಆಡಳಿತ ಸೇವೆಯ ಕೆ.ಎ.ಎಸ್. ಹಿರಿಯ ಶ್ರೇಣಿ ಅಧಿಕಾರಿಗಳ ನಿಯೋಜನೆ ಅವಕಾಶ ಕಲ್ಪಿಸಲಾಗಿದ್ದು, ಇದನ್ನು ರದ್ದು ಪಡಿಸಿ, ಶೇ 100ರಷ್ಟು ಹುದ್ದೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಬಡ್ತಿ ನೀಡಲು ಅವಕಾಶ ಕಲ್ಪಿಸುವುದು. | ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯವನ್ನು ಕೋರಿದ್ದು, ಸಿಆಸು ಇಲಾಖೆಯು ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ. | ಇಲಾಖೆಗಳ ಅಧಿಕಾರಿಗಳಿಗೆ ಮೀಸಲಿರಿಸಿದಲ್ಲಿ ಇಲಾಖೆಯ ಅಧಿಕಾರಿಗಳು ಮುಂಬಡ್ತಿಯಿಂದ ವಂಚಿತರಾಗುತ್ತಾರೆಂಬ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾಯಿತು. ಅಲ್ಲದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಇತರೆ ಇಲಾಖೆಗಳಲ್ಲಿ ಯಾವುದೇ ಹುದ್ದೆಗಳನ್ನು ಮೀಸಲಿರಿಸಿಲ್ಲವಾದ ಕಾರಣ ಹಾಲಿ ಇಲಾಖೆಯಲ್ಲಿ ಸಿಆಸು ಇಲಾಖೆಯ ಅಧಿಕಾರಿಗಳಿಗೆ ಮೀಸಲಿರಿಸಿರುವ ಹುದ್ದೆಗಳನ್ನು ರದ್ದುಪಡಿಸಿ ಸದರಿ ಹುದ್ದೆಗಳಿಗೆ ಇಲಾಖೆಯ ಅಧಿಕಾರಿಗಳಿಗೆ ಮುಂಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕೆಂದು ಸಂಘದ ಸದಸ್ಯರು ಒತ್ತಾಯಿಸಿರುತ್ತಾರೆ.<br><br>ಅಲ್ಲದೆ ಪ್ರಸ್ತುತ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದವರೆಗೆ ಮಾತ್ರ ಮುಂಬಡ್ತಿಗೆ ಅವಕಾಶವಿರುತ್ತದೆ. ಹಾಲಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳು ಕಳೆದ 15 ವರ್ಷಗಳಿಂದ ಯಾವುದೇ ಮುಂಬಡ್ತಿ ಇಲ್ಲದೆ ಇರುವುದನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಹಾಗಾಗಿ ಇತರೆ ಇಲಾಖೆಗಳಲ್ಲಿ ಇರುವಂತೆ ವಿಶೇಷವಾಗಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವಂತೆ ಆಯ್ಕೆ ಶ್ರೇಣಿ ವೃಂದಗಳ ಜೊತೆಗೆ ಸೂಪರ್ ಟೈಂ ಸ್ಕೇಲ್ ಮತ್ತು ಸೀನಿಯರ್ ಸೂಪರ್ ಟೈಂ ಸ್ಕೇಲ್ ವೃಂದಗಳನ್ನು ಸಹ ಸೃಜಿಸಿ ಮುಂಬಡ್ತಿಗೆ ಅವಕಾಶ ಕಲ್ಪಿಸುವಂತೆ ಸಭೆಯಲ್ಲಿ ಬೇಡಿಕೆ ಇಟ್ಟಿರುತ್ತಾರೆ.<br><br>ಮೇಲಿನ ವಿಷಯಗಳ ಕುರಿತು ಪರಿಶೀಲಿಸಲಾಗಿ ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಧ್ಯಕ್ಕೆ ಸಿಆಸು ಇಲಾಖೆಯ ಅಧಿಕಾರಿಗಳಿಗೆ ಮೀಸಲಿರಿಸಿರುವ ಹುದ್ದೆಗಳನ್ನು ಮುಂದುವರೆಸುವುದು ಸೂಕ್ತವಾಗಿದೆ ಎಂದು, ಉಳಿದಂತೆ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವಂತೆ ಆಯ್ಕೆ ಶ್ರೇಣಿ ವೃಂದದ ಜೊತೆಗೆ ಸೂಪರ್‌ಟೈಂ ಸ್ಕೇಲ್ ಮತ್ತು ಸೀನಿಯರ್ ಸೂಪರ್‌ಟೈಂ ಸ್ಕೇಲ್ ವೃಂದಗಳನ್ನು ಸಹ ಸೃಜಿಸುವ ಬಗ್ಗೆ ಇಲಾಖಾ ಹಂತದಲ್ಲಿ ಕ್ರಮವಹಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 6 | 8 | <u>ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯ</u> | ಈ ಕುರಿತು ಪ್ರಸ್ತಾವನೆ ಯನ್ನು ಈ ಹಿಂದೆ ಆರ್ಥಿಕ ಇಲಾಖೆಗೆ ಕಳುಹಿಸಿಕೊಡಲಾಗಿದ್ದು, 6ನೇ ವೇತನ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 155(1)ರ ಅನುಸಾರ ಸಹಾಯಕ ಕಮಿಷನರ್ ಅಥವಾ ಸಮಾನ |

| | | | | |
|---|---|---|---|---|
| | | <u>ತಾರತಮ್ಯ ಸರಿಪಡಿಸಲು ಕ್ರಮ ವಹಿಸುವುದು:-</u><br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 155(1)ರಂತೆ ಸರ್ಕಾರವು ಅಸಿಸ್ಟೆಂಟ್ ಕಮೀಷನರ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ರಾಜ್ಯ ಸರ್ಕಾರಿ ಸೇವೆಯ ಒಬ್ಬ ಗ್ರೂಪ್ "ಎ" ಅಧಿಕಾರಿಯನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡ ಬೇಕಾಗಿರುತ್ತದೆ. ಅಸಿಸ್ಟೆಂಟ್ ಕಮೀಷನರ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳು ಸಮನ ದರ್ಜೆಯ ಕಿರಿಯ ಶ್ರೇಣಿ ಗ್ರೂಪ್ "ಎ" ಹುದ್ದೆಗಳಾಗಿದ್ದರೂ ಸಹ, ಅಸಿಸ್ಟೆಂಟ್ ಕಮೀಷನರ್ ಹುದ್ದೆಯ ವೇತನ ಶ್ರೇಣಿ **ರೂ.56,800–99,600** ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯ ವೇತನ ಶ್ರೇಣಿ **<u>ರೂ.52,650–97,100</u>** ಗಳಾಗಿರುತ್ತದೆ. ಇತ್ತೀಚಿನ ಪರಿಷ್ಕೃತ ಆದೇಶದ ಮೇರೆಗೆ ಕೆ.ಎ.ಎಸ್. ವಿವಿಧ ವರ್ಗಗಳ ವೃಂದಬಲವನ್ನು ಪುನರ್ ನಿಗಧಿಪಡಿಸಿ, ಅಸಿಸ್ಟೆಂಟ್ ಕಮೀಷನರ್ ಸಮಾನ ದರ್ಜೆಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯನ್ನು **ರೂ. 56,800–99,600** ಗಳಿಗೆ ಪರಿಷ್ಕರಿಸಿ ವೇತನ ಶ್ರೇಣಿಯ ತಾರತಮ್ಯ ಸರಿಪಡಿಸಲು ಕ್ರಮವಹಿಸುವುದು. | ಆಯೋಗದ ಮುಂದೆ ಮನವಿಯನ್ನು ಸಲ್ಲಿಸುವಂತೆ ಆರ್ಥಿಕ ಇಲಾಖೆಯು ತಿಳಿಸಿದ್ದರ ಮೇರೆಗೆ ಅಂತೆಯೇ ಹಿಂಬರಹವನ್ನು ಸಂಘಕ್ಕೆ ನೀಡಲಾಗಿರುತ್ತದೆ. ಮುಂದುವರೆದು, ಈ ಸಂಬಂಧ 6ನೇ ವೇತನ ಆಯೋಗದ ಮುಂದೆಯು ಸಹ ಕೋರಿಕೆಯನ್ನು ಸಲ್ಲಿಸಲಾಗಿತ್ತು. ಆದರೆ ಕೋರಿಕೆ ಪರಿಗಣನೆಯಾಗಿರುವುದಿಲ್ಲ. ಆದಾಗ್ಯೂ ಮತ್ತೊಮ್ಮೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡಬಹುದಾಗಿರುತ್ತದೆ. | ವೃಂದದ ಅಧಿಕಾರಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯೆಂದು ನೇಮಿಸಲು ಅವಕಾಶವಿರುತ್ತದೆ. ಪ್ರಸ್ತುತ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಲು ಹಲವಾರು ಸಭೆಗಳನ್ನು ನಡೆಸುವ ಅವಶ್ಯಕತೆ ಇರುತ್ತದೆ. ಬಹಳಷ್ಟು ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಗ್ರೂಪ್ ಎ ಕಿರಿಯ ಶ್ರೇಣಿ ಅಂದರೆ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯ ಸಮಾನ ವೇತನ ಶ್ರೇಣಿ ಹೊಂದಿರುವುದರಿಂದ ಸದರಿಯವರುಗಳ ಜೊತೆ ಸಭೆ ನಡೆಸಿ ಸಮನ್ವಯ ಸಾಧಿಸಲು ಕಷ್ಟಸಾಧ್ಯವೆಂಬ ಅಂಶವನ್ನು ಸಭೆಯ ಸಂದರ್ಭದಲ್ಲಿ ಹಾಜರಿದ್ದ ಸಂಘದ ಸದಸ್ಯರು ಹಾಗೂ ಇಲಾಖೆಯ ಅಧಿಕಾರಿಗಳು ಪ್ರಸ್ತಾಪಿಸಿದ್ದು, ವಿವಿಧ ಅಭಿವೃದ್ಧಿ ಕಾಮಗಾರಿಗಳ ಸಮರ್ಪಕ ಅನುಷ್ಠಾನ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಸಮನ್ವಯದ ಹಿತದೃಷ್ಟಿಯಿಂದ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯನ್ನು ಸಹಾಯಕ ಆಯುಕ್ತರ ವೇತನ ಶ್ರೇಣಿಗೆ ಉನ್ನತೀಕರಿಸುವುದು ಸಮಂಜಸವಾಗಿರುತ್ತದೆ ಎಂಬ ಅಭಿಪ್ರಾಯ ಕಂಡುಬಂದಿರುತ್ತದೆ. ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| **7** | **9** | <u>ಅನ್ಯ ಇಲಾಖೆಯ ಅಧಿಕಾರಿಗಳ ಸೇವೆಯನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವುದು:-</u><br><br>ಇಲಾಖೆಯಲ್ಲಿ ಬಹಳಷ್ಟು ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕಾರ್ಯದರ್ಶಿ ವೃಂದದ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಒಟ್ಟು 215 ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕಾರ್ಯದರ್ಶಿ (ಪಂಚಾಯತ್ ರಾಜ್) ಮಂಜೂರಾತಿ ಹುದ್ದೆಗಳಿದ್ದು, ಈ ಪೈಕಿ ಶೇ.60 ರಷ್ಟು ಅಂದರೆ 129 ಹುದ್ದೆಗಳನ್ನು ಮುಂಬಡ್ತಿ ಮೂಲಕ ಹಾಗೂ ಶೇ.40ರಷ್ಟು ಅಂದರೆ 86 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ | ಈ ಹಿಂದೆ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ವೃಂದದಲ್ಲಿ ಸಾಕಷ್ಟು ಸಂಖ್ಯೆಯ ಅಧಿಕಾರಿಗಳು ಲಭ್ಯವಿಲ್ಲದಿದ್ದ ಕಾರಣ ಇತರೆ ಇಲಾಖೆಗಳ ಬಹಳಷ್ಟು ಅಧಿಕಾರಿಗಳು ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದರು. ಇತ್ತೀಚೆಗೆ ಇಲಾಖೆಯ ಅಧಿಕಾರಿಗಳಿಗೆ ಮುಂಬಡ್ತಿ ನೀಡಿರುವುದರಿಂದ ಕಾರ್ಯನಿರ್ವಾಹಕ ಅಧಿಕಾರಿ ವೃಂದದಲ್ಲಿ ಸಾಕಷ್ಟು ಸಂಖ್ಯೆಯ ಅಧಿಕಾರಿಗಳು ಲಭ್ಯವಿರುತ್ತಾರೆ. ಹಾಗಾಗಿ ಇತರೆ ಇಲಾಖೆಗಳ ಅಧಿಕಾರಿಗಳನ್ನು ಅವರ ಮಾತೃ ಇಲಾಖೆಗೆ |

| | | | | |
|---|---|---|---|---|
| | | ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಅನುಭವವಿಲ್ಲದ ಹಗೂ ಸದರಿ ವೃಂದದ ಕೆಳಹಂತದ ಅನ್ಯ ಇಲಾಖೆಗಳ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಿಸಲಾಗುತ್ತಿದೆ. ಇದು ಇಲಾಖೆಯ ವೃಂದ ಮತ್ತು ನೇಮಕಾತಿಗಳ ನಿಯಮಕ್ಕೆ ವಿರುದ್ಧವಗಿರುತ್ತದೆ. ಈ ಹುದ್ದೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವವರ ಸೇವೆಯನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವುದು. | ಮಾಡಲು ಅವಕಾಶವಿರುತ್ತದೆ.<br><br>ನೇರ ನೇಮಕಾತಿ ಕೋಟಾದಡಿಯಲ್ಲಿ ಪ್ರಸ್ತುತ 25 ಅಧಿಕಾರಿಗಳು ಪ್ರೊಬೆಷನರಿ ಅವಧಿಯ ಮೇರೆಗೆ ಕಾರ್ಯನಿರ್ವಹಿಸಿರುತ್ತಾರೆ. ಸರ್ಕಾರದ ಅಧಿಸೂಚನೆ ಸಂ: ಗ್ರಾಅಪ 171 ಪಬವ 2018, ದಿ: 11.07.2019 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಸ್ಥಳೀಯ ಆಡಳಿತ ಮತ್ತು ಅಭಿವೃದ್ಧಿ ಶಾಖೆ) ಗೆ ಸೇರಿದ 35 ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದಕ್ಕೆ ಮುಂಬಡ್ತಿ ನೀಡಿ ಆದೇಶಿಸಿದೆ. ಹಾಗಾಗಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದಲ್ಲಿ ಯಾವುದೇ ಹುದ್ದೆಗಳು ಮುಂಭಡ್ತಿಗೆ ಬಾಕಿ ಇರುವುದಿಲ್ಲ.<br><br>ಅದೇ ರೀತಿ ಕರ್ನಾಟಕ ಸಾಮಾನ್ಯ ಸೇವೆ (ಸ್ಥಳೀಯ ಆಡಳಿತ ಮತ್ತು ಅಭಿವೃದ್ಧಿ ಶಾಖೆ) ಯ ಸಹಾಯಕ ನಿರ್ದೇಶಕರು ವೃಂದದ 81 ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿ ವೃಂದಕ್ಕೆ ದಿ:08.07.2019 ರ ಅಧಿಸೂಚನೆ ಸಂ: ಗ್ರಾಅಪ 219 ಪಬವ 2018 (ಭಾಗ) ರಲ್ಲಿ ಮುಂಬಡ್ತಿ ನೀಡಿ ಆದೇಶಿಸಿದೆ. ಹಾಗಾಗಿ ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕರ್ಯದರ್ಶಿ ವೃಂದದಲ್ಲಿ ಮುಂಬಡ್ತಿ ಕೋಟಾದಲ್ಲಿ ಯಾವುದೇ ಹುದ್ದೆ ಇರುವುದಿಲ್ಲ. ತತ್ಪರಿಣಾಮವಾಗಿ ನಿಯೋಜನೆ ಮೇಲೆ ಇತರೆ ಇಲಾಖೆಗಳಿಂದ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿಗಳ ಸೇವೆಯನ್ನು ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ. | ಹಿಂದಿರುಗಿಸಲಾಗಿದೆ.<br><br>ಅಲ್ಲದೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಹುದ್ದೆಗಳಲ್ಲಿ ಕೇವಲ 06 ಹುದ್ದೆಗಳನ್ನು ಕೆ.ಎ.ಎಸ್. ಇವರಿಗೆ ನಿಯೋಜನೆ ಮೇಲೆ ನಿಯುಕ್ತಿಗೊಳಿಸಲು ಅವಕಾಶವಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಹಾಗೂ ಯೋಜನಾ ನಿರ್ದೇಶಕರ ಹುದ್ದೆಗಳಿಗೆ ಬೇರೆ ಬೇರೆ ಇಲಾಖೆಯ ಅಧಿಕಾರಿಗಳನ್ನು ನಿಯಮ ಭಾಹಿರವಾಗಿ ನಿಯುಕ್ತಿಗೊಳಿಸುತ್ತಿರುವ ಕುರಿತು ಸಂಘವು ಆಕ್ಷೇಪಣೆ ವ್ಯಕ್ತಪಡಿಸಿರುತ್ತದೆ.<br><br>ಮುಂದುವರೆದು, ಚರ್ಚಾ ಸಂದರ್ಭದಲ್ಲಿ ಇತರೆ ಇಲಾಖೆಗಳ ಅಧಿಕಾರಿಗಳನ್ನು ಶಾಶ್ವತವಾಗಿ ವರ್ಗಾವಣೆ ಮೂಲಕ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಿಸಬಾರದೆಂದು ಸಭೆಯಲ್ಲಿ ಹಾಜರಿದ್ದ ಸಂಘದ ಸದಸ್ಯರು ಒತ್ತಾಯಿಸಿರುತ್ತಾರೆ. ಇತ್ತೀಚೆಗೆ ಇತರೆ ಇಲಾಖೆಗಳ ಅಧಿಕಾರಿಗಳ ಶಾಶ್ವತ ವರ್ಗಾವಣೆ ಪ್ರಸ್ತಾವನೆಯನ್ನು ಪರಿಗಣಿಸದೆ ಇರುವ ಅಂಶವನ್ನು ಸಭೆಯಲ್ಲಿ ಗಮನಿಸಲಾಯಿತು. ಒಂದುವೇಳೆ ಅಂತಹ ಪ್ರಸ್ತಾವನೆಗಳು ಬಂದಲ್ಲಿ ಅವುಗಳನ್ನು ಪರಿಗಣಿಸಬಾರದೆಂದು ಸಂಘದ ಪ್ರತಿನಿಧಿಗಳು ಒತ್ತಾಯಿಸಿರುತ್ತಾರೆ.<br><br>ಆದ್ದರಿಂದ ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಬೇರೆ ಇಲಾಖೆಗಳ ಅಧಿಕಾರಿ / ನೌಕರರುಗಳನ್ನು ನಿಯೋಜನೆ ಮೇಲೆ ನಿಯುಕ್ತಿ ಗೊಳಿಸುವುದನ್ನು ಹಾಗೂ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮಾಡುವ ಮೂಲಕ ವಿಲೀನಗೊಳಿಸುವ ಪ್ರಸ್ತಾವನೆಗಳನ್ನು ಪರಿಗಣಿಸಬಾರದೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಅಲ್ಲದೆ ಇಲಾಖೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಮುಂಬಡ್ತಿಗಳನ್ನು ಸಹ ಪರಿಗಣಿಸಲು ಸಮಿತಿಯು ಶಿಫಾರಸ್ಸು ಮಾಡಿದೆ. |
| 8 | 10 | <u>ತಾಲ್ಲೂಕು ಪಂಚಾಯತಿಗಳಲ್ಲಿ ಹೆಚ್ಚುವರಿ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಸೃಜಿಸುವುದು:-</u><br>ಈ ಹಿಂದೆ ತಾಲ್ಲೂಕು ಪಂಚಾಯಿತಿಗಳಲ್ಲಿ 3 ರಿಂದ 4 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಂತೆ ಒಟ್ಟು 527 ಪಂಚಾಯಿತಿ ವಿಸ್ತರಣಾಧಿಕಾರಿಗಳ ಹುದ್ದೆಗಳಿದ್ದು, ಈ ಹುದ್ದೆಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 176 ತಾಲ್ಲೂಕು ಪಂಚಾಯತ್‌ಗಳಲ್ಲಿ ವೃಂದ-ಬಿ ದರ್ಜೆಯ ಸಹಾಯಕ ನಿರ್ದೇಶಕರು (ಗ್ರಾ.ಉ) ಹುದ್ದೆಗಳು ಶಾಶ್ವತವಾಗಿ ಮಂಜೂರಾಗಿದ್ದು, ಇದನ್ನು ಶೇ.100 ರಷ್ಟು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. | ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಗ್ರಾಮ ಪಂಚಾಯತಿ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿರುವುದರಿಂದ ಕಛೇರಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಿದ್ದು, ಹಾಲಿ ಮಂಜೂರಾಗಿರುವ ಒಂದು ಸಹಾಯಕ ನಿರ್ದೇಶಕರು, ನರೇಗಾ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿ ಹೊಂದಿದ್ದು, ಕಾರ್ಯನಿರ್ವಾಹಕ ಅಧಿಕಾರಿಯವರ ಕೆಲಸದ ಒತ್ತಡವನ್ನು ಕಡಿಮೆ ಮಾಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಕವಾಗಿ |

| | | | | |
|---|---|---|---|---|
| | | ವೃಂದದಲ್ಲಿ ವಿಲೀನಗೊಳಿಸಲಾಗಿದೆ. ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ನಡುವೆ ಸಮನ್ವಯದ ಕೊರತೆ ಇದ್ದು, ಕೆಲಸದ ಒತ್ತಡ ಅಧಿಕವಾಗಿದ್ದು, ದಿನಾಂಕ:18.09.2015 ರಂದು ನಡೆದ ಇಲಾಖೆಯ ಸಭಾ ನಡೆವಳಿಗಳಂತೆ ತ್ವರಿತವಾಗಿ ತಾಲ್ಲೂಕು ಪಂಚಾಯಿತಿಗಳಲ್ಲಿ ಎರಡು ಹೆಚ್ಚುವರಿ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ, ಪೂರ್ಣ ಪ್ರಮಾಣದಲ್ಲಿ ಬಡ್ತಿಯಿಂದ ತುಂಬಲು ಕ್ರಮ ವಹಿಸುವುದು. | ಒಟ್ಟು 176 ಹುದ್ದೆಗಳ ಜೊತೆಗೆ, ಪ್ರತಿ ತಾಲ್ಲೂಕು ಪಂಚಾಯತಿಗೆ ತಲಾ 2 ರಂತೆ ಒಟ್ಟು 352 ಸಹಾಯಕ ನಿರ್ದೇಶಕರು (ಗ್ರಾ.ಉ) ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲು ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲಾಗಿ, 6ನೇ ವೇತನ ಆಯೋಗದ ಶಿಫಾರಸ್ಸುಗಳ ಅನುಷ್ಠಾನದಿಂದಾಗಿ ಹೆಚ್ಚುವರಿ ವೇತನದ ಹೊರೆಯನ್ನು ಭರಿಸಬೇಕಾಗಿರುವುದರಿಂದ, ಪ್ರಸ್ತಾವನೆಯನ್ನು ಮುಂದೂಡುವಂತೆ ತಿಳಿಸಿರುತ್ತದೆ. | ಅನುಷ್ಠಾನಗೊಳಿಸುವ ದೃಷ್ಟಿಯಿಂದ ಹೆಚ್ಚುವರಿ 2 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇರುವ ಬಗ್ಗೆ ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಒತ್ತಾಯಿಸಿರುತ್ತಾರೆ.<br><br>ತಾಲ್ಲೂಕು ಪಂಚಾಯತಿಗಳ ಕೆಲಸದ ಒತ್ತಡ ಹೆಚ್ಚಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುವುದರಿಂದ ಮತ್ತೊಮ್ಮೆ ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸದೇ ನೇರವಾಗಿ ಸಚಿವ ಸಂಪುಟದ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಒತ್ತಾಯಿಸಿರುತ್ತಾರೆ. ಹೊಸದಾಗಿ 52 ತಾಲ್ಲೂಕುಗಳನ್ನು ಸೃಜಿಸಲಾಗಿದ್ದು, ಸದರಿ ತಾಲ್ಲೂಕು ಪಂಚಾಯತಿಗಳಿಗೆ ಅಧೀಕ್ಷಕರ ಹುದ್ದೆಯನ್ನು ಮಂಜೂರು ಮಾಡಿರುವುದಿಲ್ಲ. ಹಿಗಾಗಿ ಕಛೇರಿಯ ಕೆಲಸವನ್ನು ಸುಲಲಿತವಾಗಿ ನಿರ್ವಹಣೆ ಮಾಡಲು ಅಡಚಣೆಯಾಗುತ್ತದೆ ಎಂದು ಸಹ ಸಂಘದ ಸದಸ್ಯರು ಚರ್ಚಾ ಸಂದರ್ಭದಲ್ಲಿ ಪ್ರಸ್ತಾಪಿಸಿರುತ್ತಾರೆ.<br><br>ಈ ಎಲ್ಲಾ ಅಂಶಗಳನ್ನು ಗಮನಿಸಲಾಗಿ ಪ್ರತಿ ತಾಲ್ಲೂಕಿಗೆ ಹೊಸದಾಗಿ 2 ಹೆಚ್ಚುವರಿ ಸಹಾಯಕ ನಿರ್ದೇಶಕರ ಹುದ್ದೆಗಳನ್ನು (ಹೊಸ ತಾಲ್ಲೂಕುಗಳು ಸೇರಿದಂತೆ) ಸೃಜಿಸುವುದು ಅವಶ್ಯವಿದ್ದು, ಸದರಿ ವಿಷಯವನ್ನು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಮೂಲಕ ಸಚಿವ ಸಂಪುಟಕ್ಕೆ ಸಲ್ಲಿಸುವ ಬಗ್ಗೆ ಕ್ರಮವಹಿಸಲು ಶಿಫಾರಸ್ಸು ಮಾಡಿದೆ. |
| 9 | 11 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಗ್ರೂಪ್–ಬಿ ಹುದ್ದೆಗೆ ಉನ್ನತೀಕರಿಸುವುದು.<br>ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಕಾರ್ಯಕ್ರಮಗಳು, ಯೋಜನೆಗಳು ಅಧಿಕವಾಗಿದ್ದು, ಗ್ರಾಮ ಪಂಚಾಯಿತಿಯು ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿರುವ, ಇತರೆ ಇಲಾಖೆಯ ಕ್ಷೇತ್ರ ಅಧಿಕಾರಿಗಳ ಮೇಲೆ ಉಸ್ತುವಾರಿ ವಹಿಸುವ ಹಾಗೂ ವರದಿಯನ್ನು ಪಡೆದುಕೊಳ್ಳುವ ಅಧಿಕಾರವನ್ನು ಹೊಂದುವಂತಾಗಬೇಕು. ಈ ದಿಸೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಗ್ರೂಪ್–ಬಿ ಹುದ್ದೆಗೆ ಉನ್ನತೀಕರಿಸುವುದು ಸೂಕ್ತವಾಗಿರುತ್ತದೆ. | ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿ ಗಳಿಗೆ ಹೆಚ್ಚಿನ ಜವಾಬ್ದಾರಿ ಮತ್ತು ಪ್ರಕಾರ್ಯಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಗ್ರೂಪ್–ಬಿ ವೃಂದಕ್ಕೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಕರ್ನಾಟಕ ರಾಜ್ಯ ಆರನೇ ವೇತನ ಆಯೋಗದ ಮುಂದೆ ಶಿಫಾರಸ್ಸು ಕೋರಿ ಮಂಡಿಸಲಾಗಿತ್ತು. ಪ್ರಸ್ತುತ ಆರನೇ ವೇತನ ಆಯೋಗ ಆರ್ಥಿಕ ಇಲಾಖೆಗೆ ತನ್ನ ಶಿಫಾರಸ್ಸು ಸಲ್ಲಿಸಿದ್ದು ಶಿಫಾರಸ್ಸಿನ ವಿವರಗಳು ನಮ್ಮ ಇಲಾಖೆಗೆ ಲಭ್ಯವಿರುವುದಿಲ್ಲ. ಲಭ್ಯವಾದ ನಂತರ ಇಲಾಖೆಯಲ್ಲಿ ಶಿಫಾರಸ್ಸು ಆಧರಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು. | ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಗ್ರೂಪ್ ಬಿ ವೃಂದದ ಪತ್ರಾಂಕಿತ ವ್ಯವಸ್ಥಾಪಕರು (43100–83900) ಹುದ್ದೆಗೆ ಉನ್ನತೀಕರಿಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಮತಿಯನ್ನು ನೀಡಿರುವುದಿಲ್ಲ. ಈ ಹಿಂದೆ ವೇತನ ಆಯೋಗದ ಮುಂದೆ ಇಲಾಖಾ ವತಿಯಿಂದ ಗ್ರೇಡ್–1 ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯೆಂದು ಪರಿಗಣಿಸುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಈ ಕುರಿತಂತೆ ವೇತನ ಆಯೋಗದ ಶಿಫಾರಸ್ಸಿನ ಬಗ್ಗೆ ಇಲಾಖೆಯಲ್ಲಿ ಮಾಹಿತಿ ಇರುವುದಿಲ್ಲ. ರಾಜ್ಯದಲ್ಲಿ ಒಟ್ಟಾರೆ 6021 ಗ್ರಾಮ ಪಂಚಾಯತಿಗಳಿದ್ದು, ಪದೋನ್ನತಿಗೆ ಅವಕಾಶವಿಲ್ಲದ ಕಾರಣ ಬಹಳಷ್ಟು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಯಾವುದೇ ಮುಂಬಡ್ತಿ ಪಡೆಯದೆ ನಿವೃತ್ತಿ ಹೊಂದುವಂತಹ ಪರಿಸ್ಥಿತಿ ಇರುವುದರಿಂದ ಈ ವಿಷಯವನ್ನು ನೇರವಾಗಿ ಸಚಿವ ಸಂಪುಟದ ಮುಂದೆ ಮಂಡಿಸಿ ಅನುಮೋದನೆ ಪಡೆಯುವ ಬಗ್ಗೆ ಕ್ರಮವಹಿಸುವುದು ಸೂಕ್ತವೆಂದು ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. |

| | | | | |
|---|---|---|---|---|
| | | | | ಸದರಿ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸುವ ಕುರಿತು ಈಗಾಗಲೇ ಕಡತವನ್ನು ಸಲ್ಲಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆಗೆ ಕಡತವನ್ನು ಗ್ರಾ.ಅ.ಪಂ.ರಾಜ್ ಸಚಿವರ ಮೂಲಕ ಸಲ್ಲಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |
| 10 | 12 | ಗ್ರಾಮ ಪಂಚಾಯಿತಿಗಳಲ್ಲಿ ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಲೆಕ್ಕ ಅಧೀಕ್ಷಕರ ಹುದ್ದೆಗಳನ್ನು ಸೃಜಿಸುವುದು<br>ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು)ನಿಯಮಗಳು, 2006ರ ನಿಯಮ 114ರಂತೆ ಗ್ರಾಮ ಪಂಚಾಯಿತಿಯು ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಿಕೊಂಡು, ವಾರ್ಷಿಕ ಮತ್ತು ಆಂತರಿಕ ಲೆಕ್ಕಪರಿಶೋಧನಾ ವರದಿಯ ಮೇಲೆ ಕೈಗೊಂಡ ಕ್ರಮಗಳ ಪರಿಶೀಲನೆ ಮತ್ತು ಹಿಂದಿನ ವರದಿಗಳ ತೀರುವಳಿಗೆ ಬಾಕಿ ಉಳಿದಿರುವ ಕಂಡಿಕೆಗಳ ಬಗ್ಗೆ ಸಂಬಂಧಿಸಿದ ವಿಷಯಗಳನ್ನು ಪರಾಮರ್ಶಿಸಬೇಕಾಗುತ್ತದೆ.<br>ಈ ದಿಸೆಯಲ್ಲಿ ಪ್ರಸ್ತುತ 2500 ಗ್ರಾಮ ಪಂಚಾಯಿತಿಗಳಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ಮಾತ್ರ ಸೃಜಿಸಲಾಗಿದ್ದು, ಇನ್ನುಳಿದ ಗ್ರಾಮ ಪಂಚಾಯಿತಿಗಳಿಗೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೃಜಿಸುವುದು. ಲೆಕ್ಕ ಸಹಾಯಕ ಹುದ್ದೆಗಳ ಸೃಜನೆಯಲ್ಲಿ ಗ್ರೇಡ್–1 ಗ್ರಾಮ ಪಂಚಾಯಿತಿಗಳಿಗೆ ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಗ್ರೇಡ್–2 ಗ್ರಾಮ ಪಂಚಾಯಿತಿಗಳಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೃಜಿಸಲು ಕ್ರಮವಹಿಸುವುದು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಸೃಜಿಸುವುದು ಸೂಕ್ತವಾಗಿರುತ್ತದೆ. | ಪ್ರಸ್ತುತ ಹೆಚ್ಚಿನ ಆಡಳಿತಾತ್ಮಕ ಮತ್ತು ಆರ್ಥಿಕ ಜವಾಬ್ದಾರಿಯುಳ್ಳ ಪ್ರತಿ ಗ್ರಾಮ ಪಂಚಾಯತಿಗೆ ಒಂದು ಹುದ್ದೆಯಂತೆ ಒಟ್ಟು 2579 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಸೃಜಿಸಿ, ಭರ್ತಿ ಮಾಡಲಾಗಿದೆ. ಇನ್ನುಳಿದ ಗ್ರಾಮ ಪಂಚಾಯತಿಗಳಲ್ಲಿ ದ್ವಿತೀಯ ದರ್ಜೆ ಲೆಕ್ಕಸಹಾಯಕರ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ. ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಲೆಕ್ಕ ಅಧೀಕ್ಷಕರ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. | ಗ್ರಾಮ ಪಂಚಾಯತಿಗಳಿಗೆ ನೇಮಕಾತಿ ಹೊಂದುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್–2 ನೌಕರರಿಗೆ ಗ್ರಾಮ ಪಂಚಾಯತ್ ಕಾರ್ಯದರ್ಶಿ–1 ಹುದ್ದೆಗೆ ಮುಂಬಡ್ತಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರಸ್ತುತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡುವ ಅವಶ್ಯಕತೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, ಗ್ರಾಮ ಪಂಚಾಯತಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಲಭ್ಯವಾಗುತ್ತಿರುವುದರಿಂದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡುವುದು ಅವಶ್ಯವೆಂದು ಕಂಡುಬಂದಿರುತ್ತದೆ. ಆದ್ದರಿಂದ ಮೊದಲಿಗೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಿ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.<br>ಆದರೆ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಸೃಜಿಸುವಂತಹ ಸಂದರ್ಭಗಳು ಇರುವುದಿಲ್ಲವೆಂಬ ಅಂಶವು ಸಭೆಯಲ್ಲಿ ವ್ಯಕ್ತವಾಯಿತು. |
| 11 | 13 | ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚುವರಿ ಕ್ಲರ್ಕ್ ಕಂ ಡಾಟಾ ಎಂಟ್ರಿ | ಸರ್ಕಾರವು ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ | ಸದರಿ ವಿಷಯದ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಸದರಿ ತಡೆಯಾಜ್ಞೆ |

| | | | | |
|---|---|---|---|---|
| | | ಆಪರೇಟರ್ ಹುದ್ದೆಗಳನ್ನು ಸೃಜಿಸುವುದು<br>ಗ್ರಾಮ ಪಂಚಾಯಿತಿಗಳಲ್ಲಿ ವಿಕೇಂದ್ರೀಕರಣದ ಫಲವಾಗಿ ಗ್ರಾಮ ಪಂಚಾಯಿತಿಗಳಿಗೆ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳು ಹಾಗೂ ತತ್ಸಂಬಂಧಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅಪಾರ ಮೊತ್ತದ ಅನುದಾನಗಳು ವರ್ಗಾವಣೆಯಾಗುತ್ತಿದ್ದು, ಪ್ರತಿಯೊಂದು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಆನ್‌ಲೈನ್ ಸೇವೆಗಳ ಮೂಲಕ ಅನುಷ್ಠಾನಗೊಳಿಸಬೇಕಾಗಿರುವುದರಿಂದ<br><br>ಪ್ರತಿಯೊಂದು ಸೇವೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚುವರಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳನ್ನು ಸೃಜಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ. | ಉದ್ಯೋಗ ಖಾತರಿ ಯೋಜನೆ, ವಸತಿ ಯೋಜನೆ, ಬಾಪೂಜಿ ಸೇವಾ ಕೇಂದ್ರ ನಿರ್ವಹಣೆ, ಗಾಂಧಿ ಸಾಕ್ಷಿ ಕಾಯಕ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯನ್ನು ಸೃಜಿಸಿ, ದಿನಾಂಕ: 02–11–2017 ರಂದು ಆದೇಶ ಹೊರಡಿಸಿದೆ. ಜೊತೆಗೆ ಈ ಡಾಟಾ ಎಂಟ್ರಿ ಆಪರೇಟರ್‌ಗಳ ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಿದೆ.<br><br>ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಈ ನೇಮಕಾತಿಗೆ ಮೀಸಲಾತಿ ಕಲ್ಪಿಸಬೇಕೆಂಬ ಆಕ್ಷೇಪಣೆ ಬಂದ ಹಿನ್ನೆಲೆಯಲ್ಲಿ ತಡೆ ಹಿಡಿಯಲಾಗಿತ್ತು. ಮೀಸಲಾತಿ ಕಲ್ಪಿಸುವ ಸಂಬಂಧವಾಗಿ ಕಾನೂನು ಹಾಗೂ ಇತರ ಇಲಾಖೆಗಳ ಅಭಿಪ್ರಾಯ ಪಡೆದು ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ ಗ್ರಾಮ ಪಂಚಾಯತಿಗಳ ಕಾರ್ಯಭಾರ ಹಾಗೂ ಸ್ವಂತ ಸಂಪನ್ಮೂಲ ಸಂಗ್ರಹ ಆಧರಿಸಿ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್‌ಗಳ ಹುದ್ದೆ ಭರ್ತಿ ಮಾಡಲು ಕ್ರಮ ಕೈಗೊಳ್ಳುವ ಚಿಂತನೆ ಮಾಡಲಾಗಿದೆ. | ತೆರವುಗೊಳ್ಳುವವರೆಗೂ ಯಾವುದೇ ಕ್ರಮ ವಹಿಸಲು ಸಾಧ್ಯವಾಗುವುದಿಲ್ಲವೆಂಬ ಅಂಶವನ್ನು ಸಭೆಯಲ್ಲಿ ಗಮನಿಸಲಾಯಿತು. |
| 12 | 14 | ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಲಿಪಿಕ ನೌಕರರ ನೇಮಕಾತಿಗೆ ಕ್ರಮವಹಿಸುವುದು.<br>ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ತನ್ನದೇ ಆದಂತಹ ನೌಕರರು ಇಲ್ಲದೇ ಇರುವುದರಿಂದ ನಿಯೋಜನೆಯ ಮೇಲೆ ಬೇರೆ ಇಲಾಖೆಗಳಿಂದ ಬಂದಂತಹ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ ಪ್ರಸ್ತುತ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಶೇಕಡ 60 ರಿಂದ 70 ಹುದ್ದೆಗಳು ಖಾಲಿ ಇವೆ. ಆದುದರಿಂದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಮತ್ತು ಕೆಲವೊಮ್ಮೆ ಅನುದಾನ | ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಮಂಜೂರಾಗಿರುವ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಕುರಿತು ಕಡತ ಸಂಖ್ಯೆ: ಗ್ರಾಅಪ 142 ಕೆಎಸ್‌ಎಸ್ 2016 ರಲ್ಲಿ ಪರಿಶೀಲಿಸಲಾಗುತ್ತಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಡಿ ಈ ಹಿಂದೆ ರಚಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಪ್ರಸ್ತಾಪಿಸಿ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಆರ್ಥಿಕ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗಳಿಗೆ ಕಳುಹಿಸಿ ಅವುಗಳ ಅಭಿಪ್ರಾಯವನ್ನು ಪಡೆಯಲಾಗಿದೆ. | ಪ್ರಸ್ತುತ ಜಿಲ್ಲಾ ಪಂಚಾಯತಿ / ತಾಲ್ಲೂಕು ಪಂಚಾಯತಿಯ ನೌಕರರುಗಳಿಗೆ ಸಂಬಂಧಿಸಿದಂತೆ ಈ ಹಿಂದೆ 1988 ನೇ ಸಾಲಿನಲ್ಲಿ ರೂಪಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರದ್ದುಗೊಳಿಸಿ ಹೊಸದಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸದರಿ ನಿಯಮಗಳ ರಚನೆ ಕಾರ್ಯ ಪೂರ್ಣಗೊಂಡ ನಂತರ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ನೇರ ನೇಮಕಾತಿಗೆ ಕ್ರಮ ವಹಿಸಲಾಗುವುದೆಂಬ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಿ ಅದರಂತೆ ಕ್ರಮವಹಿಸುವುದು ಸೂಕ್ತವೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |

| | | | | |
|---|---|---|---|---|
| | | ವ್ಯಪಗತವಾಗುತ್ತಿದೆ. ಅಲ್ಲದೇ ಜಿಲ್ಲಾ ಪಂಚಾಯಿತಿಯಲ್ಲಿ ಇರುವ ಶೇಕಡ 60 ರಿಂದ 70 ನೌಕರರ ವೇತನವನ್ನು ಕೇಂದ್ರ ಸರ್ಕಾರದ ಡಿ.ಆರ್.ಡಿ.ಎ. ಅನುದಾನದಿಂದ ಶೇಕಡ 75 ಭಾಗ ಭರಿಸಲಾಗುತ್ತಿದೆ. ಆದ್ದರಿಂದ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಲಿಪಿಕ ನೌಕರರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ, ಲಿಪಿಕ ನೌಕರರ ನೇಮಕಾತಿಗೆ ಕ್ರಮವಹಿಸುವುದು. | ಮೇಲ್ಕಂಡ ಇಲಾಖೆಗಳು ನೀಡಿರುವ ಅಭಿಪ್ರಾಯಗಳನ್ನು ಪರಿಶೀಲಿಸಿ ಕೆಲವೊಂದು ಸೂಕ್ತ ಮಾರ್ಪಾಡಿನೊಂದಿಗೆ ಹಾಲಿ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯಿತಿಗಳ ವೃಂದಗಳನ್ನು ಕರ್ನಾಟಕ ಸಿವಿಲ್ ಸೇವಾ ಅಧಿನಿಯಮದಡಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಸರ್ಕಾರದ ಮಟ್ಟದಲ್ಲಿ ಸದರಿ ಸೇವೆಯನ್ನು ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಗಳೆಂದು ಪದನಾಮೀಕರಿಸಿ ಕರಡು ವೃಂದ ಮತ್ತು ನೇಮಕತಿ ನಿಯಮಗಳನ್ನು ರಚಿಸಲು ಪ್ರಸ್ತಾಪಿಸಿದೆ. ಕರಡು ನಿಯಮಗಳನ್ನು ಸಿಆಸು ಇಲಾಖೆ, ಆರ್ಥಿಕ ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆಗಳ ಸಹಮತಿಯೊಂದಿಗೆ ಹೊರಡಿಸುವ ಪೂರ್ವದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅನುಮೋದನೆಗೆ ಕಡತವನ್ನು ಸಲ್ಲಿಸಲಾಗಿದೆ (ದಿನಾಂಕ:14.02.2019). ಅನುಮೋದನೆ ನಿರೀಕ್ಷಣೆಯಲ್ಲಿದೆ.<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರ ನೇರ ನೇಮಕಾತಿಗಾಗಿ ಕ್ರಮ ವಹಿಸಬಹುದು. | |
| 13 | 15 | <u>ಜಿಲ್ಲಾ ಪಂಚಾಯತಿಯಲ್ಲಿನ ಸಹಾಯಕ ಯೋಜನಾಧಿಕಾರಿ–1 ಮತ್ತು 2 ರ ಹುದ್ದೆಗಳನ್ನು ಶಾಶ್ವತ ಹುದ್ದೆಗಳನ್ನಾಗಿ ಪರಿವರ್ತಿಸುವುದು:–</u><br><br>ರಾಜ್ಯದ 6024 ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೃಂದದ ಹುದ್ದೆಗಳಿದ್ದು, ಪ್ರಸ್ತುತ ಕೇವಲ 176 ಸಹಾಯಕ ನಿರ್ದೇಶಕರು ವೃಂದದ | ಜಿಲ್ಲಾ ಪಂಚಾಯತ್‌ಗಳಲ್ಲಿ ಒಂದರಂತೆ ಒಟ್ಟು 30 ಜಿಲ್ಲಾ ಪಂಚಾಯತಿಗಳಲ್ಲಿ 30 ವೃಂದ–ಎ (ಕಿರಿಯ ಶ್ರೇಣಿ) ದರ್ಜೆಯ ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ) ಹುದ್ದೆಗಳನ್ನು ಹಾಗೂ 30 ವೃಂದ–ಬಿ ದರ್ಜೆಯ ಸಹಾಯಕ ಯೋಜನಾಧಿಕಾರಿ (ಎಸ್.ಜಿಎಸ್.ವೈ) ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಲಾಗಿರುತ್ತದೆ. | ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ ಒಟ್ಟು 30 ಗ್ರೂಪ್–ಎ (ಕಿರಿಯ ಶ್ರೇಣಿ) ವೃಂದದ ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ) ಹಾಗೂ 30 ವೃಂದ–ಬಿ ದರ್ಜೆಯ ಸಹಾಯಕ ಯೋಜನಾಧಿಕಾರಿ (ಎಸ್.ಜಿ.ಎಸ್.ವೈ) ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.<br>ಈ ಪೈಕಿ ಗ್ರೂಪ್–ಎ ಕಿರಿಯ ಶ್ರೇಣಿ ವೃಂದದ ಹುದ್ದೆಗಳನ್ನು ಡಿ.ಆರ್.ಡಿ.ಎ. ಅಡಿಯಲ್ಲಿ ಸೃಜಿಸಲಾಗಿದ್ದು, ಈಗಾಗಲೇ ಸದರಿ ಯೋಜನೆಯಡಿ ಸೃಜಿಸಲಾದ 30 ಯೋಜನಾಧಿಕಾರಿ (ಗ್ರೂಪ್–ಎ ಹಿರಿಯ ಶ್ರೇಣಿ) ಹುದ್ದೆಗಳನ್ನು ಶಾಶ್ವತ ಹುದ್ದೆಗಳೆಂದು |

| | | | | |
|---|---|---|---|---|
| | | ಹುದ್ದೆಗಳಿರುವುದರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಂಬಡ್ತಿ ಅವಕಾಶವು ನಿರಾಶಾದಾಯಕವಾಗಿರುತ್ತದೆ.<br>ಆದ್ದರಿಂದ, ಜಿಲ್ಲಾ ಪಂಚಾಯಿತಿಯಲ್ಲಿನ ಸಹಾಯಕ ಯೋಜನಾಧಿಕಾರಿ–1 ಮತ್ತು 2ರ ಹುದ್ದೆಗಳನ್ನು ಶಾಶ್ವತ ಹುದ್ದೆಗಳನ್ನಾಗಿ ಪರಿವರ್ತಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಂಬಡ್ತಿ ಅವಕಾಶವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದು. | ಈ ಪೈಕಿ 30 ವೃಂದ–ಎ (ಕಿರಿಯ ಶ್ರೇಣಿ) ದರ್ಜೆಯ ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ) ಹುದ್ದೆಗಳನ್ನು ಶಾಶ್ವತ ಹುದ್ದೆಗಳೆಂದು ಪರಿಗಣಿಸಿ, ವೃಂದ ಬಲಕ್ಕೆ ಸೇರಿಸುವ ಸಂಬಂಧ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಿ ಕಡತವನ್ನು ಈಗಾಗಲೇ ಸಲ್ಲಿಸಲಾಗಿರುತ್ತದೆ. ಇದುವರೆವಿಗೂ ಕಡತ ಅಭಿಪ್ರಾಯದೊಂದಿಗೆ ಸ್ವೀಕೃತಾಗಿರುವುದಿಲ್ಲ.<br><br><u>ಸಹಾಯಕ ಯೋಜನಾಧಿಕಾರಿ–2:–</u><br>ಜಿಲ್ಲಾ ಪಂಚಾಯತ್‌ಗಳಲ್ಲಿನ ಸಹಾಯಕ ಯೋಜನಾಧಿಕಾರಿ–2 ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಸಹಾಯಕ ನಿರ್ದೇಶಕರು (ಗ್ರಾ.ಉ) ವೃಂದದ ಅಧಿಕಾರಿಗಳಿಗೆ ಸ್ಥಳನಿಯುಕ್ತಿಗೊಳಿಸಲಾಗುತ್ತಿದೆ. ಈ ತಾತ್ಕಾಲಿಕ ಹುದ್ದೆಗಳನ್ನು ಶಾಶ್ವತ ಹುದ್ದೆಗಳೆಂದು ಪರಿವರ್ತಿಸಲು / ಪರಿಗಣಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಬೇಕಾಗಿರುತ್ತದೆ. | ಪರಿಗಣಿಸಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲಾಗಿರುವುದರಿಂದ ಈ ಹುದ್ದೆಗಳಿಗೂ ಸಹ ಅದೇ ರೀತಿ ಅವಕಾಶ ಕಲ್ಪಿಸಲು ಕ್ರಮವಹಿಸುವುದು ಸೂಕ್ತವೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿರುತ್ತದೆ.<br><br>ಗ್ರೂಪ್–ಬಿ ವೃಂದದ 30 ಸಹಾಯಕ ಯೋಜನಾಧಿಕಾರಿ ಹುದ್ದೆಗಳನ್ನು ________ ಸಾಲಿನಲ್ಲಿ ಸೃಜಿಸಲಾಗಿದ್ದು, ಈ ಹುದ್ದೆಗಳನ್ನು ಜಿಲ್ಲಾ ಪಂಚಾಯತ್‌ಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಂದುವರೆಸುವ ಅವಶ್ಯಕತೆ ಇರುತ್ತದೆ. ಹಾಗಾಗಿ ಈ ಹುದ್ದೆಗಳನ್ನು ಸಹ ಶಾಶ್ವತ ಹುದ್ದೆಗಳೆಂದು ಪರಿಗಣಿಸುವ ಬಗ್ಗೆ ಹಾಗೂ ಮುಂಬಡ್ತಿ ಮೂಲಕ ಸದರಿ ಹುದ್ದೆಗಳನ್ನು ತುಂಬಲು ಅವಕಾಶ ಕಲ್ಪಿಸಲು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು ಹಾಗೂ ಸದಸ್ಯರು ಅಭಿಪ್ರಾಯ ಪಟ್ಟಿರುತ್ತಾರೆ.<br><br>ಆದ್ದರಿಂದ ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಸಹಾಯಕ ಯೋಜನಾಧಿಕಾರಿ ಹುದ್ದೆಗಳನ್ನು ಶಾಶ್ವತ ಹುದ್ದೆಗಳೆಂದು ಬದಲಾಯಿಸಲು ಇಲಾಖಾ ಹಂತದಲ್ಲಿ ಕ್ರಮವಹಿಸಲು ಸಮಿತಿಯು ಶಿಫಾರಸ್ಸು ಮಾಡಿದೆ. |
| 14 | 16 | ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಹುದ್ದೆಯನ್ನು ಎಕ್ಸ್‌ಕೇಡರ್ ಮಾಡುವ ಕುರಿತು: ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಎಂದು ಇಲಾಖೆಯ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಯಲ್ಲಿ ಶೇ.32% ಹುದ್ದೆಗಳನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ)–13 ಹುದ್ದೆ ಎಂದು ಉನ್ನತೀಕರಿಸಲಾಗಿದೆ. ಆದರೆ ಸದರಿ ಹುದ್ದೆಗಳು ಈಗಲೂ ಜಿಲ್ಲಾ ಪಂಚಾಯತಿಯಲ್ಲಿಯ ಉಪ ಕಾರ್ಯದರ್ಶಿ ಹುದ್ದೆಯಲ್ಲಿ ಇರುತ್ತವೆ. ಆದ್ದರಿಂದ ಸದರಿ 13 ಹುದ್ದೆಗಳು ಇಲಾಖೆಯ ಕೇಂದ್ರ ಕಛೇರಿಯಲ್ಲಿ ವಿವಿಧ ಹುದ್ದೆಗಳಿಗೆ ಎಕ್ಸ್ ಕೇಡರ್ ಮಾಡಲು ಕೋರಿದೆ. ಈ ಕೆಳಕಂಡ ಹುದ್ದೆಗಳನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ)ಗೆ | ಪ್ರಸ್ತುತ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದಲ್ಲಿ ಒಟ್ಟು 13 ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಗುರುತಿಸಿರುವುದಿಲ್ಲ. ಈ ಹಿಂದೆ ಆಯ್ಕೆ ಶ್ರೇಣಿಯ ಅಧಿಕಾರಿಗಳನ್ನು ಜಿ.ಪಂ.ಯ ಮು.ಕಾ.ನಿ.ಅ ಹುದ್ದೆಗಳಿಗೆ ನೇಮಿಸಲಾಗುತ್ತಿತ್ತು. ಪ್ರಸ್ತುತ ಈ ಹುದ್ದೆಗಳನ್ನು ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಗಳಿಗೆ ಎಕ್ಸ್ ಕೇಡರ್ ಮಾಡಲಾಗಿರುತ್ತದೆ. ಆದುದರಿಂದ, ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೆ ಸ್ಥಳನಿಯುಕ್ತಿಗೊಳಿಸಲು ಅನುವಾಗುವಂತೆ, ಅಧಿಕಾರಿಗಳ ಸಂಘದವರು ಕೋರಿರುವಂತೆ, 13 ಹುದ್ದೆಗಳನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದಿಂದ ನೇಮಿಸಲು ಎಕ್ಸ್ ಕೇಡರ್ | ಪ್ರಸ್ತುತ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದಕ್ಕೆ ಈಗಾಗಲೇ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವೃಂದೀಕರಿಸಿರುವ ಹುದ್ದೆಗಳ ಜೊತೆಗೆ ಇಲಾಖೆಯಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಮಂಜೂರಾಗಿರುವ ಕೆಲವು ಹುದ್ದೆಗಳನ್ನು ಇಲಾಖೆಯ ಅಧಿಕಾರಿಗಳಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡುವ ಬಗ್ಗೆ ಅಂದರೆ ಸದರಿ ಹುದ್ದೆಗಳನ್ನು ಇಲಾಖೇಯ ಅಧಿಕಾರಿಗಳಿಗೆ ವೃಂದೀಕರಿಸುವ ಬಗ್ಗೆ ಸಿಆಸು ಇಲಾಖೆಯಲ್ಲಿ ಪ್ರಸ್ತಾವನೆ ಬಾಕಿ ಇರುತ್ತದೆ. ಸಿಆಸು ಇಲಾಖೆಯ ಸಹಮತಿ ಬಂದ ನಂತರ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ವೃಂದದಲ್ಲಿ ಲಭ್ಯವಾಗುವ ಹುದ್ದೆಗಳ ಸಂಖ್ಯೆಯನ್ನು ಆಧರಿಸಿ ಸದರಿ ವೃಂದದ ಶೇ 32 ರಷ್ಟು ಹುದ್ದೆಗಳನ್ನು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಎಂದು ವೃಂದೀಕರಿಸುವ ಬಗ್ಗೆ ಇಲಾಖಾ ಹಂತದಲ್ಲಿ ಕ್ರಮವಹಿಸುವ ಕುರಿತು ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು.<br><br>ಈ ರೀತಿ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) |

| | | | | |
|---|---|---|---|---|
| | | ಎನ್ ಕೇಡರ್ ಮಾಡಲು ಕೋರಿದೆ.<br><br>1. ನಿರ್ದೇಶಕರು (ಪಂ.ರಾಜ್–1)<br>2. ನಿರ್ದೇಶಕರು (ಪಂ.ರಾಜ್–2)<br>3. ನಿರ್ದೇಶಕರು (ಗ್ರಾಮೀಣ ಮೂಲ ಸೌಕರ್ಯ–2).<br>4. ನಿರ್ದೇಶಕರು (ಸುವರ್ಣ ಗ್ರಾಮೋದಯ)<br>5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.<br>6. ನಿರ್ದೇಶಕರು (ಗುಣ ನಿಯಂತ್ರಣ, ಜಾಗೃತಿ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.<br>7. ಉಪ ಕಾರ್ಯದರ್ಶಿ – ಗ್ರಾಮೀಣ ನೀರು ಸರಬರಾಜು, ಗ್ರಾಮೀಣ ಕುಡಿಯುವ ನೀರು ಆಯುಕ್ತಾಲಯ<br>8. ಉಪ ನಿರ್ದೇಶಕರು – ಗ್ರಾಮೀಣ ಕುಡಿಯುವ ನೀರು, ಗ್ರಾಮೀಣ ಕುಡಿಯುವ ನೀರು ಆಯುಕ್ತಾಲಯ.<br>9. ನಿರ್ದೇಶಕರು – ಎಸ್ಐಆರ್‌ಡಿ, ಮೈಸೂರು.<br>10. ಪ್ರಾದೇಶಿಕ ನಿರ್ದೇಶಕರು – ಎಸ್ಐಆರ್‌ಡಿ, ಬೆಂಗಳೂರು.<br>11. ಕಾರ್ಯನಿರ್ವಾಹಕ ನಿರ್ದೇಶಕರು – ಎಂಜಿಐಆರ್‌ಡಿ<br>12. ಮುಖ್ಯ ಆಡಳಿತಾಧಿಕಾರಿ – ಕೆಆರ್‌ಐಡಿಎಲ್, ಬೆಂಗಳೂರು<br>13. ನಿರ್ದೇಶಕರು (ಇ–ಆಡಳಿತ) | ಹುದ್ದೆಗಳೆಂದು ಪರಿಗಣಿಸಬಹುದಾಗಿರುತ್ತದೆ. | ವೃಂದಕ್ಕೆ ಹುದ್ದೆಗಳ ನಿಗಧಿಯಾದ ನಂತರ ಜಿಲ್ಲಾ ಪಂಚಾಯತಿ ಹಂತದಲ್ಲಿ ಸದರಿ ಹುದ್ದೆಗಳನ್ನು ಅಪರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯೆಂದು ಪುನರ್ ಪದನಾಮೀಕರಿಸುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಅಲ್ಲದೆ ಯಾವ ಯಾವ ಜಿಲ್ಲಾ ಪಂಚಾಯತಿಗಳಲ್ಲಿ ಒಂದು ಹುದ್ದೆ ಮಂಜೂರಾಗಿದೆಯೋ ಅಂತಹ ಹುದ್ದೆಗಳನ್ನು ಗುರುತಿಸಿ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಂದ ಸದರಿ ಹುದ್ದೆಗಳನ್ನು ಭರ್ತಿ ಮಾಡುವುದು ಸೂಕ್ತವೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.<br><br>ಮೇಲೆ ಪ್ರಸ್ತಾಪಿಸಿರುವಂತೆ ಹುದ್ದೆಗಳ ಪುನರ್ ಪದನಾಮೀಕರಣ ಹಾಗೂ ಸದರಿ ಹುದ್ದೆಗಳನ್ನು ಇಲಾಖಾ ಅಧಿಕಾರಿಗಳಿಗೆ ಎನ್‌ಕೇಡರ್ ಮಾಡಲು ಅಗತ್ಯ ಕ್ರಮವಹಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. |

ಮೇಲೆ ಪ್ರಸ್ತಾಪಿಸಿರುವ ಬೇಡಿಕೆಗಳಲ್ಲದೆ ಚರ್ಚಾ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಸಂಘದ ಪ್ರತಿನಿಧಿಗಳು ಈ ಕೆಳಕಂಡ ಬೇಡಿಕೆಗಳ ಕುರಿತು ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಮಂಡಿಸಿರುತ್ತಾರೆ:–

1. ಹಾಲಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಐ.ಎ.ಎಸ್./ ಕೆ.ಎ.ಎಸ್. ಶ್ರೇಣಿಯ ಅಧಿಕಾರಿಗಳನ್ನು ನೇಮಿಸುತ್ತಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಯಾವುದೇ ಹುದ್ದೆಗಳನ್ನು ಮೀಸಲಿರಿಸಿರುವುದಿಲ್ಲ. ಇಲಾಖೆಯಲ್ಲಿ ಉಪ ಕಾರ್ಯದರ್ಶಿ (ಹಿರಿಯ ಶ್ರೇಣಿ) ಮತ್ತು ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ಹುದ್ದೆಗಳಲ್ಲಿ ದೀರ್ಘಾವಧಿಯಿಂದ ಕೆಲಸ ನಿರ್ವಹಿಸುವ ಗ್ರಾ ಅ ಪಂ.ರಾಜ್ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಅನುಭವ ಮತ್ತು ಪರಿಣಿತಿ ಹೊಂದಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯನ್ನು ಹೆಚ್ಚು ಸಮರ್ಥವಾಗಿ ನಿರ್ವಹಿಸಲು ಶಕ್ತರಾಗಿರುವ ಕಾರಣ

ಗ್ರಾ.ಅ.ಪಂ.ರಾಜ್ ಇಲಾಖೆಯ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೆ ಶೇ 50 ರಷ್ಟು ಹುದ್ದೆಗಳನ್ನು ಮೀಸಲಾಗಿರಿಸಲು ಸಂಘವು ಒತ್ತಾಯಿಸಿರುತ್ತದೆ.

**ಸಮಿತಿಯು ಶಿಫಾರಸ್ಸು:**

ಸಂಘದ ಕೋರಿಕೆಯ ಬಗ್ಗೆ ಚರ್ಚಿಸಲಾಗಿ ಕೋರಿಕೆಯು ಪ್ರಸ್ತುತವಾಗಿರುತ್ತದೆ. ಆದ್ದರಿಂದ ಜಿಲ್ಲಾ ಪಂಚಾಯಿತಿಗಳ ಒಟ್ಟು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳ ಪೈಕಿ ಶೇ 50 ರಷ್ಟು ಹುದ್ದೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪ ಕಾರ್ಯದರ್ಶಿ (ಆಯ್ಕೆ ಶ್ರೇಣಿ) ವೃಂದಕ್ಕೆ ಮೀಸಲಿರಿಸುವುದು ಸೂಕ್ತವಾಗಿದ್ದು, ಈ ಕೋರಿಕೆಯ ಬಗ್ಗೆ ಪ್ರಸ್ತಾವನೆಯನ್ನು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಮೂಲಕ ಸಿಆಸು ಇಲಾಖೆಗೆ ಕಳುಹಿಸಲು ಸಮಿತಿಯು ಶಿಫಾರಸ್ಸು ಮಾಡಿದೆ.

2. ಗ್ರೇಡ್ 1 ಗ್ರಾಮ ಪಂಚಾಯತ್ ಕಾರ್ಯದರ್ಶಿ ವೃಂದದಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಪ್ರಸ್ತುತ ಶೇ 50 ರಷ್ಟು ನೇರ ನೇಮಕಾತಿಗೆ ಹಾಗೂ ಶೇ 50 ರಷ್ಟು ಮುಂಬಡ್ತಿಗೆ ಮೀಸಲಿರಿಸಲಾಗಿದೆ. ಆದರೆ ಸಭೆಯಲ್ಲಿ ಹಾಜರಿದ್ದ ಸಂಘದ ಪ್ರತಿನಿಧಿಗಳು ಹಾಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್ 1 ವೃಂದದಲ್ಲಿ ದೀರ್ಘಾವಧಿಗೆ ಸೇವೆ ಸಲ್ಲಿಸಿದ ನಂತರವು ಸಹ ಮುಂಬಡ್ತಿ ಅವಕಾಶಗಳು ತೀರ ಕಡಿಮೆ ಇರುವುದರಿಂದ ಮುಂಬಡ್ತಿಗೆ ಹೆಚ್ಚಿನ ಶೇಕಡವಾರು ಪ್ರಮಾಣವನ್ನು ನಿಗಧಿಪಡಿಸಬೇಕೆಂದು ಸಭೆಯಲ್ಲಿ ಸಂಘದ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅದರನ್ವಯ ನೇರ ನೇಮಕಾತಿ ಕೋಟಾವನ್ನು ಶೇ 35 ಕ್ಕೆ ಕಡಿತಗೊಳಿಸಿ ಮುಂಬಡ್ತಿ ಕೋಟಾವನ್ನು ಶೇ 65 ಕ್ಕೆ ಹೆಚ್ಚಿಸಬೇಕೆಂದು ಕೋರಿರುತ್ತಾರೆ. ಕೋರಿಕೆಯು ಸಮಂಜಸವಾಗಿರುತ್ತದೆ. ನೇರ ನೇಮಕಾತಿ ಕೋಟಾದಲ್ಲಿ ಆಯ್ಕೆ ಆಗುವ ಕೆಲವು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ಒಂದು ಮುಂಬಡ್ತಿಯನ್ನು ಪಡೆಯದಂತಹ ಸನ್ನಿವೇಶವಿರುವುದರಿಂದ ನೇರ ನೇಮಕಾತಿ ಕೋಟಾವನ್ನು ಕಡಿಮೆ ಮಾಡಿ ಮುಂಬಡ್ತಿ ಕೋಟಾವನ್ನು ಹೆಚ್ಚಿಸುವುದು ಅವಶ್ಯವಿರುತ್ತದೆ.

ಆದ್ದರಿಂದ ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಸಮಿತಿಯು ಶಿಫಾರಸ್ಸು ಮಾಡಿದೆ.

3. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದಾ: ಸಚಿವಾಲಯ ಸೇವೆಗಳ ಶಾಖಾಧಿಕಾರಿ ಹುದ್ದೆ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆ ಹಾಗೂ ಗೃಹ ಇಲಾಖೆಯ ಪೋಲೀಸ್ ಇನ್ಸ್‌ಪೆಕ್ಟರ್ ವೃಂದಗಳಲ್ಲಿ ನೇರ ನೇಮಕಾತಿ ಮಾಡುವ ಹುದ್ದೆಗಳಿಗೆ in service ಕೋಟಾವನ್ನು ಸಹ ನಿಗಧಿಪಡಿಸಲಾಗಿದೆ. ಅದೇ ರೀತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಕೋಟಾದಲ್ಲಿ ಭರ್ತಿ ಮಾಡುವ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್ 1 & ಗ್ರೇಡ್ 2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ in service ಕೋಟಾವನ್ನು ನಿಗದಿಪಡಿಸಬೇಕೆಂದು ಸಂಘದ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸಂಘದ ಪ್ರತಿನಿಧಿಗಳು ತಿಳಿಸಿರುವಂತೆ ವಿವಿಧ ಇಲಾಖೆಗಳಲ್ಲಿ in service ಕೋಟಾ ನೀಡಿರುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ in service ಕೋಟಾ ನಿಗಧಿಪಡಿಸಿರುವುದು ಕಂಡುಬರುತ್ತದೆ. ಅದೇ ರೀತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನೇರ ನೇಮಕಾತಿ ಕೋಟಾದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ in service ಕೋಟಾ ನೀಡುವ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

4. ಕಾರ್ಯನಿರ್ವಾಹಕ ಅಧಿಕಾರಿ ವೃಂದದ ಹುದ್ದೆಗಳಲ್ಲಿ ಮುಂಬಡ್ತಿಗೆ ಹಾಗೂ ನೇರ ನೇಮಕಾತಿಗೆ ಕ್ರಮವಾಗಿ ಶೇ 60 ಮತ್ತು ಶೇ 40 ರಷ್ಟು ಪ್ರಮಾಣವನ್ನು ನಿಗಧಿಪಡಿಸಲಾಗಿದೆ. ಸಭೆಯಲ್ಲಿ ಹಾಜರಿದ್ದ ಸಂಘದ ಪ್ರತಿನಿಧಿಗಳು ಹಾಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ಶೇಕಡವಾರು ಪ್ರಮಾಣವನ್ನು ಕ್ರಮವಾಗಿ ಮುಂಬಡ್ತಿಗೆ ಶೇ 75 ರಷ್ಟು ಹಾಗೂ ನೇರ ನೇಮಕಾತಿಗೆ ಶೇ 25 ರಷ್ಟು ಹುದ್ದೆಗಳನ್ನು ನಿಗಧಿಪಡಿಸಿ ಸೂಕ್ತ ತಿದ್ದುಪಡಿ ಮಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಬಗ್ಗೆ ಚರ್ಚಿಸಿದ ಸಂದರ್ಭದಲ್ಲಿ ನೇರ ನೇಮಕಾತಿ ಕೋಟಾದಲ್ಲಿ ಆಯ್ಕೆ ಆಗುವ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅವರ ಸೇವಾವಧಿಯಲ್ಲಿ ಮುಂಬಡ್ತಿಯ ಅವಕಾಶಗಳು ಕಡಿಮೆ ಇರುವುದು ಸ್ಪಷ್ಟವಾಗುತ್ತದೆ. ಹಾಲಿ ಉಪ ಕಾರ್ಯದರ್ಶಿ ವೃಂದದಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲವು ಅಧಿಕಾರಿಗಳು 15

ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಅದೇ ವೃಂದದಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ನೇರ ನೇಮಕಾತಿ ಕೋಟಾವನ್ನು ಕಡಿಮೆ ಮಾಡುವುದು ಅವಶ್ಯವಿರುತ್ತದೆ.

ಆದ್ದರಿಂದ ಈ ದಿಸೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

5. ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಲಿಪಿಕ ವೃಂದದ ನೌಕರರುಗಳಿಗೆ ತಾತ್ಕಾಲಿಕವಾಗಿ ಮುಂಬಡ್ತಿಯನ್ನು ತಡೆಹಿಡಿಯಲಾಗಿದ್ದು, ಹಾಲಿ ಅಧೀಕ್ಷಕ ವೃಂದದವರೆಗೆ ಮಾತ್ರ ಮುಂಬಡ್ತಿಗೆ ಅವಕಾಶವಿದ್ದು, ಈ ಸಂಬಂಧದ ನಿಯಮಗಳನ್ನು ಸೂಕ್ತವಾಗಿ ಮಾರ್ಪಡಿಸಿ ಗ್ರೂಪ್–ಬಿ ಮತ್ತು ಗ್ರೂಪ್–ಎ ವೃಂದದ ಹುದ್ದೆಗಳಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು ವಿಷಯ ಪ್ರಸ್ತಾಪಿಸಿರುತ್ತಾರೆ. ಹಾಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳ ಲಿಪಿಕ ಸಿಬ್ಬಂದಿಗಳಿಗೆ ಈ ಹಿಂದೆ 1988 ರಲ್ಲಿ ರೂಪಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೆಲವೊಂದು ಲೋಪಗಳಿದ್ದ ಕಾರಣ ಅವುಗಳನ್ನು ಮಾರ್ಪಾಡು ಮಾಡಲು ತೀರ್ಮಾನಿಸಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ತಯಾರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಗ್ರೂಪ್ ಸಿ ವೃಂದದ ಮ್ಯಾನೇಜರ್/ಕಛೇರಿ ಅಧೀಕ್ಷಕ ವೃಂದದವರೆಗೆ ಮಾತ್ರ ಮುಂಬಡ್ತಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳಲ್ಲಿನ ಹುದ್ದೆಗಳನ್ನು ಹೊಸದಾಗಿ ರಚಿಸಲಾಗುತ್ತಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸರ್ಕಾರದ ನೇರ ನಿಯಂತ್ರಣದ ಹುದ್ದೆಗಳೆಂದು ಪರಿಗಣಿಸಿ ಸದರಿ ಹುದ್ದೆಗಳನ್ನು ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ **Shawdow Post** ಎಂದು ಕೆಲಸ ನಿರ್ವಹಿಸಲು ಅವಕಾಶ ಮಾಡಲಾಗಿದೆ. ಅಲ್ಲದೆ ಈ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ನೌಕರರ ಜೇಷ್ಠತೆಯನ್ನು ರಾಜ್ಯ ಮಟ್ಟದಲ್ಲಿ ನಿರ್ವಹಿಸಬೇಕಾಗುತ್ತದೆ. ಹಾಲಿ ಈ ವೃಂದಗಳಲ್ಲಿ ಕೆಲಸ ನಿರ್ವಹಿಸುವ ನೌಕರರುಗಳಿಗೆ ಮುಂಬಡ್ತಿಯ ಅವಕಾಶ ಕಲ್ಪಿಸುವ ಸಲುವಾಗಿ ಹಾಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಿಗೆ ಮಂಜೂರಾಗಿರುವ ಮ್ಯಾನೇಜರ್/ಕಛೇರಿ ಅಧೀಕ್ಷಕ ವೃಂದದ ಹುದ್ದೆಗಳಲ್ಲಿ ಜಿಲ್ಲಾ ಪಂಚಾಯತಿಗೆ ಒಂದರಂತೆ ಒಟ್ಟು 30 ಹುದ್ದೆಗಳನ್ನು ಗ್ರೂಪ್ ಬಿ ವೃಂದದ ಪತ್ರಾಂಕಿತ ವ್ಯವಸ್ಥಾಪಕರು (43100–83900) ಎಂದು ಹುದ್ದೆಯನ್ನು ಉನ್ನತೀಕರಿಸಿ ಮುಂಬಡ್ತಿಗೆ ಅವಕಾಶ ಕಲ್ಪಿಸಲು ಸಂಘದ ಸದಸ್ಯರ ಕೋರಿಕೆ ಇರುತ್ತದೆ. ಅದೇ ರೀತಿ ಹಾಲಿ ಜಿಲ್ಲಾ ಪಂಚಾಯತ್‌ಗಳಿಗೆ ಮಂಜೂರಾಗಿರುವ ಗ್ರೂಪ್ ಬಿ ವೃಂದದ ಸಹಾಯಕ ಯೋಜನಾಧಿಕಾರಿ 30 ಹುದ್ದೆಗಳಿಗೂ ಸಹ ಲಿಪಿಕ ವೃಂದದಿಂದ ಮುಂಬಡ್ತಿ ನೀಡಲು ಸೂಕ್ತ ಅವಕಾಶ ಕಲ್ಪಿಸಬೇಕೆಂಬುದು ಪ್ರತಿನಿಧಿಗಳ ಕೋರಿಕೆಯಾಗಿರುತ್ತದೆ.

ಈ ಬಗ್ಗೆ ಚರ್ಚಿಸಿದ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ನೇಮಕಾತಿ ಹೊಂದಿರುವ ಲಿಪಿಕ ವೃಂದದ ನೌಕರರಿಗೆ ಕಛೇರಿ ಅಧೀಕ್ಷಕ ಹುದ್ದೆ ವರೆಗೆ ಮಾತ್ರ ಮುಂಬಡ್ತಿಗೆ ಅವಕಾಶವಿರುತ್ತದೆ. ಅದರ ನಂತರ ಮುಂಬಡ್ತಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಸದರಿಯವರುಗಳಿಗೆ ಮುಂಬಡ್ತಿಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಕಛೇರಿ ಅಧೀಕ್ಷಕರ ವೃಂದವನ್ನು ಪತ್ರಾಂಕಿತ ಮ್ಯಾನೇಜರ್ ಹುದ್ದೆಗೆ ಉನ್ನತೀಕರಿಸಲು ಹಾಗೂ ಸಹಾಯಕ ಯೋಜನಾಧಿಕಾರಿ ವೃಂದದ 30 ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಪರಿಗಣಿಸಿದ ನಂತರ ಸದರಿ ಹುದ್ದೆಗಳಿಗೆ ಲಿಪಿಕ ವೃಂದದ ನೌಕರರುಗಳಿಗೆ 15 ಹುದ್ದೆಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ 15 ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸುವುದು ಸೂಕ್ತವಾಗಿದೆ. ಈ ದಿಸೆಯಲ್ಲಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಶಿಫಾರಸ್ಸು ಮಾಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

6. ಇದಲ್ಲದೆ ಗ್ರೂಪ್ ಎ ಕಿರಿಯ ಶ್ರೇಣಿ ವೃಂದದ ಸಹಾಯಕ ಯೋಜನಾಧಿಕಾರಿ 30 ಹುದ್ದೆಗಳು ಮಂಜೂರಾಗಿರುತ್ತವೆ. ಸದರಿ ಹುದ್ದೆಗಳಿಗೆ ಇದುವರೆವಿಗೂ ಮುಂಬಡ್ತಿಗೆ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಈಗಾಗಲೇ ಈ ಹುದ್ದೆಗಳನ್ನು ಶಾಶ್ವತ ಹುದ್ದೆಗಳೆಂದು ಪರಿಗಣಿಸುವ ಬಗ್ಗೆ ಮೇಲಿನ ಕಂಡಿಕೆಗಳಲ್ಲಿ ಶಿಫಾರಸ್ಸು ಮಾಡಲಾಗಿದೆ. ಶಾಶ್ವತ ಹುದ್ದೆಗಳೆಂದು ಪರಿಗಣಿಸಿದ ನಂತರ ಈ ಹುದ್ದೆಗಳ ಪೈಕಿ ತಲಾ 15 ಹುದ್ದೆಗಳನ್ನು (ಒಟ್ಟು 30) ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿ ಲಿಪಿಕ ನೌಕರರುಗಳಿಗೆ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮುಂಬಡ್ತಿಗೆ ಕಾಯ್ದಿರಿಸಬೇಕೆಂದು ಸಮಿತಿಯಲ್ಲಿ ಚರ್ಚಾ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಆದ್ದರಿಂದ ಈ ದಿಸೆಯಲ್ಲಿ ಆರ್ಥಿಕ ಇಲಾಖೆಯನ್ನು

ಸಂಪರ್ಕಿಸಲು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಶಿಫಾರಸ್ಸು ಮಾಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

**ಸಮಿತಿಯ ಶಿಫಾರಸ್ಸು:** ಸದರಿ ಬೇಡಿಕೆ ಬಗ್ಗೆ ಸಮಿತಿಯು ಪರಿಶೀಲಿಸಿದ್ದು, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳ ನೌಕರರುಗಳಿಗೆ ಅಧೀಕ್ಷಕ/ಕಛೇರಿ ಮ್ಯಾನೇಜರ್ ವೃಂದದ ನಂತರ ಯಾವುದೇ ಮುಂಬಡ್ತಿಗೆ ಅವಕಾಶವಿರುವುದಿಲ್ಲ. ಹೊಸದಾಗಿ ಸೃಜಿಸಲಾಗುತ್ತಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿಯೂ ಸಹ ಗ್ರೂಪ್ ಬಿ/ಗ್ರೂಪ್ ಎ ವೃಂದದ ಹುದ್ದೆಗಳಿಗೆ ಮುಂಬಡ್ತಿಗೆ ಅವಕಾಶವಿರುವುದಿಲ್ಲ. ಸಂಸದೀಯ ವ್ಯವಹಾರಗಳ ಇಲಾಖೆಯು ಸದರಿ ಕರಡು ನಿಯಮಗಳನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಗ್ರೂಪ್ ಬಿ, ಗ್ರೂಪ್ ಎ ಹುದ್ದೆಗಳ ಸೃಜನೆ / ಉನ್ನತೀಕರಣ ಕುರಿತು ಪರಿಶೀಲಿಸುವಂತೆ ಆಡಳಿತ ಇಲಾಖೆಗೆ ಸಲಹೆ ನೀಡಿರುತ್ತದೆ. ಹಾಗಾಗಿ ಹಾಲಿ ಜಿಲ್ಲಾ ಪಂಚಾಯತಿ /ತಾಲ್ಲೂಕು ಪಂಚಾಯತಿಗಳಿಗೆ ಮಂಜೂರಾಗಿರುವ ಮ್ಯಾನೇಜರ್ / ಕಛೇರಿ ಅಧೀಕ್ಷಕ ವೃಂದದ ಹುದ್ದೆಗಳ ಪೈಕಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ ಒಟ್ಟು 30 ಹುದ್ದೆಗಳನ್ನು ಗ್ರೂಪ್ ಬಿ ವೃಂದದ ಪತ್ರಾಂಕಿತ ಮ್ಯಾನೇಜರ್ ಹುದ್ದೆ ಎಂದು ಉನ್ನತೀಕರಿಸಿ ಮುಂಬಡ್ತಿಗೆ ಅವಕಾಶ ಕಲ್ಪಿಸುವುದು ಸೂಕ್ತವಾಗಿದೆ. ಅದೇ ರೀತಿ ಹಾಲಿ ಜಿಲ್ಲಾ ಪಂಚಾಯತ್‌ಗಳಿಗೆ ಮಂಜೂರಾಗಿರುವ ಗ್ರೂಪ್ ಬಿ ವೃಂದದ ಸಹಾಯಕ ಯೋಜನಾಧಿಕಾರಿ 30 ಹುದ್ದೆಗಳು ಹಾಗೂ ಡಿ.ಆರ್.ಡಿ.ಎ. ಯೋಜನೆಯಲ್ಲಿ ಮಂಜೂರಾಗಿರುವ ಗ್ರೂಪ್ ಎ ವೃಂದದ ಸಹಾಯಕ ಯೋಜನಾಧಿಕಾರಿ ಹುದ್ದೆಗಳನ್ನು ಜಿಲ್ಲಾ ಪಂಚಾಯತ್. / ತಾಲ್ಲೂಕು ಪಂಚಾಯತ್ ಸೇವೆಯ ಲಿಪಿಕ ವೃಂದದ ನೌಕರರುಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದ ನೌಕರರುಗಳಿಗೆ ಮುಂಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸುವ ಬಗ್ಗೆ ಕ್ರಮ ವಹಿಸಬಹುದಾಗಿದೆ.

7. ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-2 ವೃಂದದಿಂದ ಗ್ರೇಡ್-1 ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದದಿಂದ ಕ್ರಮವಾಗಿ ಶೇ 20 ಮತ್ತು ಶೇ 30 ರಂತೆ (ಒಟ್ಟು 50) ಹಾಗೂ ಉಳಿಕೆ ಶೇ 50 ರಷ್ಟನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುತ್ತದೆ.

ವಾಸ್ತವವಾಗಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್ 2 ವೃಂದದಲ್ಲಿ ಕೆಲಸ ನಿರ್ವಹಿಸುವ ನೌಕರರು ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ನೇಮಕಾತಿ ಹೊಂದಿ ನಂತರ ಸೇವಾ ಸಕ್ರಮಾತಿಗೊಂಡು ಮುಂದುವರೆದವರಾಗಿರುತ್ತಾರೆ. ಹಾಗಾಗಿ ಸದರಿಯವರು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್ 1 ವೃಂದಕ್ಕೆ ಮುಂಬಡ್ತಿ ಹೊಂದುವ ಪೂರ್ವದಲ್ಲಿಯೇ ಅಥವಾ ಒಂದು ಮುಂಬಡ್ತಿ ಪಡೆದ ನಂತರ ಸೇವೆಯಿಂದ ನಿವೃತ್ತಿ ಹೊಂದುತ್ತಾರೆ. ಆದರೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ನೇರ ನೇಮಕಾತಿ ಹೊಂದುವ ಕಾರಣ ಸದರಿಯವರುಗಳು ಹೆಚ್ಚಿನ ಸೇವೆ ಹೊಂದಿದ್ದು, ಇನ್ನು ಮುಂದೆ ಮುಂಬಡ್ತಿ ಪಡೆಯುವ ಅವಕಾಶವನ್ನು ಹೊಂದಿರುತ್ತಾರೆ. ಹಾಗಾಗಿ ಹಾಲಿ ಶೇ 50 ರಷ್ಟು ನೇರ ನೇಮಕಾತಿ ಕೋಟಾವನ್ನು ಮಾರ್ಪಾಡು ಮಾಡಿ ಒಟ್ಟು ಮುಂಬಡ್ತಿ ಕೋಟಾದ ಹುದ್ದೆಗಳ ಪೈಕಿ ಶೇ 40 ರಷ್ಟು ಹುದ್ದೆಗಳನ್ನು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್ 2 ವೃಂದಕ್ಕೆ, ಶೇ 30 ರಷ್ಟು ಹುದ್ದೆಗಳನ್ನು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಂದ ಮುಂಬಡ್ತಿ ನೀಡಲು ಹಾಗೂ ಬಾಕಿ ಉಳಿಯುವ ಶೇ 30 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕೆಂಬ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾಗಿರುತ್ತದೆ. ಸದರಿ ಶೇಕಡವಾರು ಪ್ರಮಾಣಗಳ ಕುರಿತು ಸಂಬಂಧಪಟ್ಟ ವೃಂದಗಳ ಪ್ರತಿನಿಧಿಗಳ ಸಮಕ್ಷಮ ಚರ್ಚೆ ಮಾಡಿ ನಿರ್ಣಯಿಸಿರುವುದರಿಂದ ಈ ಕುರಿತಂತೆ ಸೂಕ್ತ ಕ್ರಮವಹಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಅಪರ್ಣಾ ಪಾವಟೆ,
ಸರ್ಕಾರದ ಉಪ ಕಾರ್ಯದರ್ಶಿ (ಆ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಿದ್ದೇಶ್ ಪೋತಲಕಟ್ಟಿ,
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಎಸ್.ಎ.ಅಶ್ರಫುಲ್ ಹಸನ್,
ನಿರ್ದೇಶಕರು (ಪಂ.ರಾಜ್-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಕೆ.ರೇವಣಪ್ಪ,
ನಿರ್ದೇಶಕರು, (ಗ್ರಾ.ಮೂ.ಸೌ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಡಾ॥ ಸಿ.ಸಿದ್ದರಾಮಯ್ಯ
ಉಪ ಕಾರ್ಯದರ್ಶಿ,
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ

ಶ್ರೀನಿವಾಸ ಮಾರಂಗಪ್ಪನವರ್
ಮುಖ್ಯ ಕಾರ್ಯಾಚರಣಾಧಿಕಾರಿ,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಶರಣಯ್ಯ ಸಸಿಮಠ, ಅಧ್ಯಕ್ಷರು,
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ
ಮತ್ತು ನೌಕರರ ಸಂಘ (ರಿ)

ಹೆಚ್.ಆರ್.ರಾಜೇಶ್,
ಪಿ.ಡಿ.ಒ., ರಾಜನಕುಂಟೆ ಗ್ರಾ.ಪಂ,
ಬೆಂಗಳೂರು ಉತ್ತರ

ಜಗದೀಶ್ ಕೆ.ಎಸ್.
ಸಹಾಯಕ ನಿರ್ದೇಶಕರು (ಗ್ರಾ.ಉ.)
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಹೆಚ್.ಬಸವರಾಜು,
ವ್ಯವಸ್ಥಾಪಕರು (ಆಡಳಿತ)
ಜಿಲ್ಲಾ ಪಂಚಾಯತ್, ದಾವಣಗೆರೆ

ರಾಮಕೃಷ್ಣ, ಅಧೀಕ್ಷಕರು
ಮುಖ್ಯ ಇಂಜಿನಿಯರ್ ರವರ ಕಛೇರಿ,
ಪಂ.ರಾ.ಇಂ. ಇಲಾಖೆ, ಬೆಂಗಳೂರು